# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಶುಕ್ರವಾರ, ಏಪ್ರಿಲ್ 02, 2021

ಸಂಪುಟ : 47 ಸಂಚಿಕೆ : 333 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




## ಅನ್ನದಾನದಂತೆ ಮಜ್ಜಿಗೆ ವಿತರಣೆಯೂ ಶ್ರೇಷ್ಠ

### 25ನೇ ವರ್ಷದ ಉಚಿತ ಮಜ್ಜಿಗೆ ವಿತರಣೆಗೆ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಚಾಲನೆ

ದಾವಣಗೆರೆ, ಏ.1- ಹಸಿದವರಿಗೆ ಅನ್ನ ನೀಡುವ ಹಾಗೂ ಬಾಯಾರಿಕೆ ನೀಗಿಸುವ ಕಾರ್ಯ ಪ್ರಶಂಸನೀಯ. ಅಂತೆಯೇ ಬೇಸಿಗೆಯಲ್ಲಿ ಬಳಲಿದ ಜನರಿಗೆ ಮಜ್ಜಿಗೆ ನೀಡಿ, ದಣಿವಾರಿಸುವುದೂ ಸಹ ಶ್ರೇಷ್ಠ ಸೇವೆ ಎಂದು 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಅಭಿಪ್ರಾಯಪಟ್ಟರು.

ನಗರದ ನಗರ ಪಾಲಿಕೆ ಆವರಣದಲ್ಲಿಂದು ವಿಕಾಸ ತರಂಗಿಣಿ ಹಾಗೂ ಸ್ಫೂರ್ತಿ ಸೇವಾ ಟ್ರಸ್ಟ್ ವತಿಯಿಂದ 25ನೇ ವರ್ಷದ ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮವನ್ನು ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಕೊರೊನಾದಂತಹ ಸಂದರ್ಭದಲ್ಲೂ ಸಂಸ್ಥೆಯ ಸತ್ಯನಾರಾಯಣ ರಾವ್ ಮತ್ತು ಪ್ರಾಯೋಜಕತ್ವದ ತಂಡ ಉತ್ಸಾಹದಿಂದ ಜನತೆಗೆ ಉಚಿತ ಮಜ್ಜಿಗೆ ವಿತರಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಪ್ರತಿ ವರ್ಷವೂ ನಮ್ಮ ಪತ್ರಿಕೆಯಲ್ಲಿ ಮಜ್ಜಿಗೆ ವಿತರಣೆಯ ವಿಚಾರವನ್ನು ಪ್ರಕಟಿಸುತ್ತಿದ್ದೆವು. ಈ ವರ್ಷದ ಕಾರ್ಯಕ್ರಮದಲ್ಲಿ ನಾನೇ ಭಾಗವಹಿಸಿ, ಪರೋಪಕಾರದ ಸೇವೆಯನ್ನು ಕಂಡದ್ದು ಖುಷಿ ತಂದಿದೆ. ಇಂತಹ ಸೇವೆ ಹೀಗೆಯೇ ಮುಂದುವರೆಯಲಿ ಎಂದು ಆಶಿಸಿದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಕಳೆದ 25 ವರ್ಷಗಳಿಂದ ಒಂದು ವರ್ಷವೂ ತಪ್ಪದೇ ಜನರಿಗೆ ಉಚಿತವಾಗಿ ಮಜ್ಜಿಗೆ ವಿತರಣೆ ಮಾಡುವ ಕೆಲಸ ದೊಡ್ಡ (2ನೇ ಪುಟಕ್ಕೆ)

## ಕಸಾಪಕ್ಕೆ 2ನೇ ಬಾರಿಯೂ ಆಯ್ಕೆ ಬಯಸಿ ಮಂಜುನಾಥ್ ಕುರ್ಕಿ ನಾಮಪತ್ರ ಸಲ್ಲಿಕೆ



ದಾವಣಗೆರೆ, ಏ.1- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಎರಡನೇ ಬಾರಿಗೆ ಆಯ್ಕೆ ಬಯಸಿ, ಪರಿಷತ್ತಿನ ಹಾಲಿ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಅವರು ಇಂದು ನಾಮಪತ್ರ ಸಲ್ಲಿಸಿದರು.

ನಗರದ ತಾಲ್ಲೂಕು ಕಚೇರಿಗೆ ತೆರಳಿದ ಅವರು, ಚುನಾವಣಾಧಿಕಾರಿಗಳೂ ಆದ ತಹಸೀಲ್ದಾರ್ ಗಿರೀಶ್ ಅವರಿಗೆ ತಮ್ಮ ಉಮೇದುವಾರಿಕೆ ಅರ್ಜಿಯನ್ನು ನೀಡಿದರು.

ಅಪೂರ್ವ ಹೋಟೆಲ್ ನಲ್ಲಿ ಅಭಿಮಾನಿಗಳಿಂದ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಂಜುನಾಥ್ ಕುರ್ಕಿ ಅವರಿಗೆ ಕಸಾಪ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಪುನಃ ಅಧ್ಯಕ್ಷರಾಗಿ ಆಯ್ಕೆಯಾಗಬೇಕೆಂಬ ಸದಾಶಯ ವ್ಯಕ್ತವಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ (2ನೇ ಪುಟಕ್ಕೆ)

# ಬಿಜೆಪಿಯಲ್ಲಿ ದೂರಾಟ

## ಈಶ್ವರಪ್ಪ ವಿರುದ್ಧ ಹೈ ಕಮಾಂಡ್‌ಗೆ ಯಡಿಯೂರಪ್ಪ ದೂರು

ಬೆಂಗಳೂರು, ಏ. 1 – ರಾಜ್ಯಪಾಲರಿಗೆ ತಮ್ಮ ವಿರುದ್ಧ ದೂರು ನೀಡಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ನಡೆಯ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವುದಲ್ಲದೆ, ವರಿಷ್ಠರಿಗೆ ದೂರು ನೀಡಿದ್ದಾರೆ.

ರಾಜ್ಯದ ಇತಿಹಾಸದಲ್ಲೇ ಮುಖ್ಯಮಂತ್ರಿಗಳ ವಿರುದ್ಧ ರಾಜ್ಯಪಾಲರಿಗೆ ಸಚಿವರು ದೂರು ನೀಡಿಲ್ಲ. ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಬೇಕಾಗಿದ್ದನ್ನು ರಾಜಭವನದ ಅಂಗಳಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಇಂತಹವರನ್ನು ಮಂತ್ರಿಮಂಡಲದಲ್ಲಿ ಉಳಿಸಿಕೊಳ್ಳಬೇಕೇ? ಎಂದು ವರಿಷ್ಠರನ್ನು ಪ್ರಶ್ನಿಸಿದ್ದಾರೆ.

ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಅರುಣ್‌ಸಿಂಗ್ ಅವರನ್ನು ಸಂಪರ್ಕಿಸಿರುವ ಯಡಿಯೂರಪ್ಪ, ನಾನು ಸಂತೆ ನಡೆಸುತ್ತಿಲ್ಲ. ಸರ್ಕಾರ ನಡೆಸುತ್ತಿದ್ದೇನೆ. ಕೊರೊನಾ ಆರ್ಥಿಕ ಸಂಕಷ್ಟದಲ್ಲೂ ಸರ್ಕಾರವನ್ನು ಸುಲಭವಾಗಿ ಕೊಂಡೊಯ್ಯುತ್ತಿದ್ದೇನೆ.

### ಈಶ್ವರಪ್ಪ ನಡೆಗೆ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಖಂಡನೆ

ಇದರ ನಡುವೆ ಶಾಸಕರ ಅಭಿವೃದ್ಧಿ ಕೆಲಸಗಳಿಗೂ ಆದ್ಯತೆ ನೀಡಬೇಕಾಗಿದೆ. ಗ್ರಾಮೀಣ ರಸ್ತೆಗೆ ಹಣ ಬಿಡುಗಡೆ ಮಾಡುವ ಮುನ್ನ ಈಶ್ವರಪ್ಪ ಅವರ ಸಚಿವಾಲಯದ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ನೀವು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಇದಾದ ನಂತರ ಅರುಣ್‌ಸಿಂಗ್ ದೆಹಲಿಯಿಂದಲೇ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ, ಈಶ್ವರಪ್ಪ ಅವರ ನಡಾವಳಿಕೆಯನ್ನು ಖಂಡಿಸಿದ್ದಾರೆ.

ನಂತರ ಮುಖ್ಯಮಂತ್ರಿಯವರು ನಗರದಲ್ಲಿದ್ದ ಹಿರಿಯ ಸಚಿವರು ಮತ್ತು ಶಾಸಕರನ್ನು ಗೃಹ ಕಚೇರಿಗೆ ಕರೆಸಿಕೊಂಡು ಈಶ್ವರಪ್ಪ ವಿರುದ್ಧ (2ನೇ ಪುಟಕ್ಕೆ)

### ರಾಷ್ಟ್ರಪತಿ ಆಡಳಿತಕ್ಕೆ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು, ಏ. 1 - ಮುಖ್ಯಮಂತ್ರಿಗಳ ವಿರುದ್ಧ ಹಿರಿಯ ಸಚಿವ ಕೆ.ಎಸ್.ಈಶ್ವರಪ್ಪ ಮಾಡಿರುವ ಆರೋಪ ಗಂಭೀರ ಸ್ವರೂಪದ್ದಾಗಿದ್ದು ರಾಜ್ಯದ ಆಡಳಿತ ಕುಸಿದು ಬಿದ್ದಿರುವುಕ್ಕೆ ಸಾಕ್ಷಿಯಾಗಿದೆ ಎಂದಿರುವ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಪಾಲರು ತಕ್ಷಣ ಮಧ್ಯೆ ಪ್ರವೇಶಿಸಿ ಮುಖ್ಯಮಂತ್ರಿಯವರನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸ್ಸು ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಅಕ್ರಮಗಳ ಬಗ್ಗೆ ವಿರೋಧ ಪಕ್ಷದ ನಾಯಕನಾಗಿ ನಾನು (2ನೇ ಪುಟಕ್ಕೆ)

## ಒಂದೇ ದಿನ 72 ಸಾವಿರ ಸೋಂಕು

ನವದೆಹಲಿ, ಏ. 1 – ದೇಶದಲ್ಲಿ ಒಂದೇ ದಿನ ದೊಡ್ಡ ಪ್ರಮಾಣದಲ್ಲಿ ಕೊರೊನಾ ಸೋಂಕುಗಳ ಸಂಖ್ಯೆ ಹೆಚ್ಚಾಗಿದ್ದು, ಗುರುವಾರ ದೇಶಾದ್ಯಂತ 72,330 ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ ಸೋಂಕಿನಿಂದ 459 ಜನರು ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಕಳೆದ 22 ದಿನಗಳಿಂದ ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಾ ಬಂದಿದ್ದು, ಈಗ 5.84 ಲಕ್ಷಕ್ಕೆ ತಲುಪಿದೆ. (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 17 ಜನರಿಗೆ ಪಾಸಿಟಿವ್

ದಾವಣಗೆರೆ, ಏ.1- ಜಿಲ್ಲೆಯಲ್ಲಿ ಗುರುವಾರ 17 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಪ್ರಸ್ತುತ ಜಿಲ್ಲೆಯಲ್ಲಿ 67 ಸಕ್ರಿಯ ಪ್ರಕರಣಗಳಿವೆ

ದಾವಣಗೆರೆ ತಾಲ್ಲೂಕಿನಲ್ಲಿ 7 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದರೆ, ಹರಿಹರ ಹಾಗೂ ಜಗಳೂರಿನಲ್ಲಿ ತಲಾ 1, ಚನ್ನಗಿರಿಯಲ್ಲಿ 2, ಹೊನ್ನಾಳಿ 3 ಹಾಗೂ ಹೊರ ಜಿಲ್ಲೆಯಿಂದ ಬಂದ ಮೂವರಲ್ಲಿ ಸೋಂಕು ಕಾಣಿಸಿಕೊಂಡಿದೆ. 8 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

## ದಾವಣಗೆರೆ-ಹರಿಹರ ಅರ್ಬನ್ ಸಹಕಾರಿಗೆ 7.28 ಕೋಟಿ ರೂ. ಲಾಭ



ದಾವಣಗೆರೆ,ಏ.1- ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್, 2021 ಮಾರ್ಚ್ ಅಂತ್ಯಕ್ಕೆ 7.28 ಕೋಟಿ ರೂ. ಲಾಭ ಗಳಿಸಿರುವ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಎ. ಮುರುಗೇಶ್ ಸಂತಸ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, 2020-21ನೇ ಸಾಲಿನಲ್ಲಿ ಆದಾಯ ತೆರಿಗೆ 1.49 ಕೋಟಿ ರೂ. ಮತ್ತು ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ 4.32 ಕೋಟಿ ರೂ. ನಿವ್ವಳ ಲಾಭ ಗಳಿಸಿದ್ದು, ಇದು ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ಗಣನೀಯವಾಗಿ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ ಎಂದು ತಿಳಿಸಿದ್ದಾರೆ.

5.50 ಕೋಟಿ ರೂ. ಷೇರು ಬಂಡವಾಳ, 45.63 (2ನೇ ಪುಟಕ್ಕೆ)


ನೆನಪಿನಂಗಳದಾರಾಧನೆ ಆಹ್ವಾನ ಪತ್ರಿಕೆ

'ನಮನಗಳು'



ದಾವಣಗೆರೆ ತಾಲ್ಲೂಕು
ದೊಡ್ಡಬಾತಿ ಗ್ರಾಮದ ವಾಸಿಯಾದ
ಪ್ರೊ|| ಬಾತಿ ಬಸವರಾಜ್ ಮತ್ತು ಕುಟುಂಬದವರು
ಮಾಡುವ ನಮಸ್ಕಾರಗಳು.

ಆತ್ಮೀಯರೇ,
ದಿನಾಂಕ 09-08-2020ನೇ ಭಾನುವಾರ
ನನ್ನ ಸಹೋದರ
ಶ್ರೀ ಭರಮಜ್ಜರ ನಾಗರಾಜಪ್ಪನವರು
ಮರಣ ವೃತ್ತಿಕಾ ಪ್ರಯುಕ್ತ
ಸುಶಾಂತತೆಗಾಗಿ

'ನೆನಪಿನಂಗಳದಾರಾಧನೆ'ಯನ್ನು
ದಿನಾಂಕ 02-04-2021ನೇ ಶುಕ್ರವಾರ
ಬೆಳಿಗ್ಗೆ 11-00 ಗಂಟೆಗೆ ದೊಡ್ಡಬಾತಿಯ ಸ್ವಗೃಹದಲ್ಲಿ
ನೆರವೇರಿಸಲಿದ್ದೇವೆ. ತಾವುಗಳೆಲ್ಲರೂ ಶಾಂತೋದಯಕ್ಕೆ
ಆಗಮಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ತಮ್ಮ ಅಭಿಲಕ್ಷಿತರು
ಶ್ರೀಮತಿ ಎಂ.ಎಸ್. ನಾಗಮ್ಮ ಮತ್ತು ಕುಟುಂಬದವರು
ಶ್ರೀಮತಿ ಎಸ್. ಲೀಲಾವತಿ ಮತ್ತು ಕುಟುಂಬದವರು
ಬಂಧುಗಳು ಮತ್ತು ಮಿತ್ರರು, ದೊಡ್ಡಬಾತಿ.

ಇಂದ : ಪ್ರೊ|| ಬಾತಿ ಬಸವರಾಜ್
ದೊಡ್ಡಬಾತಿ - 577 566.
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.
ಮೊ. : 88845 27130, 98868 40401

ಮೃತ್ಯು ಸ್ತುತಿ

ನನ್ನ ಮಣ್ಣಿಗೆ ನೀವು
ಯಾವುದಾದರೊಂದು ರೂಪ ಕೊಟ್ಟರೆ,
ಅದನ್ನು ಮುರಿದು ಹಾಕಿರಿ.
ಏಕೆಂದರೆ ನಿಮ್ಮ ಒಲವು : ನಿಮ್ಮ ದುಃಖ ;
ಮುರಿಯುತ್ತಲೇ ಇತ್ತು ನನ್ನದೆಯನ್ನು

ಒಮ್ಮೆ ಹುಟ್ಟಿದ ಮೇಲೆ
ಕನಸಾಗಿ ಹೋದ ನನ್ನ ಜೀವನ,
ಇವೆಲ್ಲ ನನ್ನ ಗಂಭೀರವಾದ
ಮೌನದ ಮಧ್ಯದಲ್ಲಿ,
ತೇಲಿ ಬರುತ್ತದೆ.

ಮಲ ಮೂತ್ರಗಳ ಮಧ್ಯದಲ್ಲಿ ಸಾವು
ತನ್ನ ಅರಮನೆಯನ್ನು ಕಟ್ಟಿಕೊಂಡಿದೆ.
ಲಭಿಸಲಿ ನಿನಗೆ ಪ್ರಶಾಂತತೆಯು ಸಾನ್ನಿಧ್ಯ,
ನಿನಗೀ ಬೆಳಕು ಶುಭ ಶುಭ್ರವಾಗಿರಲಿ.

ಜಗವೆಲ್ಲ ನಗುತಿರಲಿ,
ಜಗದಳುವ ನಮಗಿರಲಿ.
ಮಣ್ಣಿನ ಗುಡಿ ಇದು ಈ ಜಗವೆಲ್ಲ;
ಮೃತ್ಯುಕಟಿಕರು ನಾವುಗಳೆಲ್ಲ.










ಭಾವಪೂರ್ಣ ಶ್ರದ್ಧಾಂಜಲಿ

ನಮ್ಮೆಲ್ಲರ ಆತ್ಮೀಯರಾಗಿದ್ದ ಶ್ರೀ ಎ.ಎಂ. ರಾಮಣ್ಣ ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಶ್ರೀ ಎ.ಎಂ. ರಾಮಣ್ಣನವರು

ಪ್ರಥಮ ದರ್ಜೆ ಗುತ್ತಿಗೆದಾರರು, ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಮಾಜಿ ಅಧ್ಯಕ್ಷರು, ದಾವಣಗೆರೆ ಬ್ಲಾಕ್ ಕಾಂಗ್ರೆಸ್ ಮಾಜಿ ಖಜಾಂಚಿಗಳು, ಕಬಡ್ಡಿ ಕ್ರೀಡಾಪಟುಗಳು

ಇವರು ದಿನಾಂಕ 25.3.2021ರಂದು ನಿಧನರಾದ ಪ್ರಯುಕ್ತ ದಿನಾಂಕ 02.04.2021ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ 2ನೇ ಮುಖ್ಯ ರಸ್ತೆ, 4ನೇ ತಿರುವು, ವಿಜಯನಗರ ಬಡಾವಣೆ, ಕೊಂಡಜ್ಜಿ ರಸ್ತೆ, ದಾವಣಗೆರೆ ಇಲ್ಲಿರುವ ಮೃತರ ಸ್ವಗೃಹದಲ್ಲಿ 'ಕೈಲಾಸ ಶಿವಗಣಾರಾಧನೆ' ಯನ್ನು ಏರ್ಪಡಿಸಲಾಗಿದ್ದು, ತಾವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಪತ್ನಿ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು

ಶ್ರದ್ಧಾಂಜಲಿ ಕೋರುವವರು :

✦ ಎಸ್.ಟಿ. ವೀರೇಶ್, ಪೂಜ್ಯ ಮಹಾಪೌರರು ಹಾಗೂ ಗುತ್ತಿಗೆದಾರರು
✦ ಹೆಚ್. ಜಯಣ್ಣ ✦ ಬಿ. ರಮೇಶ್ ✦ ಡಿ. ಈಶ್ವರ್ ✦ ಕೆ.ಹೆಚ್. ಮಹೇಶ್
✦ ವಿ. ಶ್ರೀನಿವಾಸ ✦ ಇ. ರುದ್ರೇಶ್ ✦ ಬಿ. ಉಮಾಪತಿ
✦ ಆರ್. ಶ್ರೀನಿವಾಸ, ಪಾಲಿಕೆ ಮಾಜಿ ಸದಸ್ಯರು ✦ ಕೆ. ಶಿವಕುಮಾರ್
✦ ಕೆ. ಬಸವರಾಜ್ ✦ ಜಿ.ಎಲ್. ಶಿವಪ್ರಕಾಶ್ ✦ ಬಿ.ಹೆಚ್. ದಾನೇಶ್ ✦ ಮೈಲಾರಪ್ಪ
✦ ಎಂ.ಎನ್. ವೇಣು ✦ ಡಿ.ಶಿವಕುಮಾರ್ ✦ ಅರುಣಕುಮಾರ್ ಮಾನೆ
✦ ಪಿಸಾಳೆ ಶ್ರೀನಿವಾಸ ✦ ರಾಕೇಶ್ ಅಡಿಮಾನಿ ✦ ಮಂಜು ಪಾಟೀಲ್
✦ ಬಿ.ಹೆಚ್. ಉದಯಕುಮಾರ್ ✦ ಬಿ. ಜಯವಿಭವ (ಸಂಜು) ✦ ಸಿ.ಜಿ. ಮನೋಜ್
✦ ಕೆ. ಗಂಗಪ್ಪ ✦ ಹೆಚ್. ಕುಮಾರ್ ✦ ಕೆ. ಮುಜಮಿಲ್ ಅಹ್ಮದ್

# ಮಹಿಳೆಯರು ಸ್ವಾವಲಂಬಿಗಳಾಗಬೇಕು



ದಾವಣಗೆರೆ, ಏ.1- ಮಹಿಳೆಯರು ನಾಲ್ಕು ಗೋಡೆಗಳಿಗೆ ಸೀಮಿತವಾಗದೇ ಉದ್ಯೋಗ ಪಡೆಯುವ ಮೂಲಕ ಆರ್ಥಿಕ ಸ್ವಾವಲಂಬಿಗಳಾಗಬೇಕು ಎಂದು ಎಸ್.ಎಸ್. ಮೆಡಿಕಲ್ ಕಾಲೇಜಿನ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ಶಶಿಕಲಾ ಕೃಷ್ಣಮೂರ್ತಿ ಕರೆ ನೀಡಿದರು.

ಇಲ್ಲಿನ ಪಿಸಾಳೆ ಕಾಂಪೌಂಡ್‌ನಲ್ಲಿ ಬುಧವಾರ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಶುಭಲಕ್ಷ್ಮಿ ಮಹಿಳಾ ಮಂಡಳಿಯಿಂದ ನಡೆದ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳಿಂದ ಹೆಣ್ಣಿಗೆ ಸಮಾನತೆ ಇರಲಿಲ್ಲ. ಬಸವಣ್ಣನವರು ಮಹಿಳೆಗೆ ಸಮಾನತೆಯನ್ನು ಕಲ್ಪಿಸಿದರು. ಮಹಿಳೆಯರಿಗೆ ಹೆಚ್ಚಿನ ಕಾಳಜಿ, ಪ್ರೀತಿ ನೀಡಿದರೆ ಸಾಕು. ಈ ದೇಶ ಉದ್ಧಾರವಾಗುತ್ತದೆ ಎಂದರು.

ಪತಿ-ಪತ್ನಿ ಒಂದೇ ಗಾಡಿಯ ಎರಡು ಚಕ್ರಗಳಿದ್ದಂತೆ. ಎರಡೂ ಸಲೀಸಾಗಿ ಸಾಗಿದಾಗ ಮಾತ್ರ ಜೀವನ ಸುಂದರವಾಗಿರುತ್ತದೆ ಎಂದರು.

ಹೆಣ್ಣಿನ ಸ್ಥಿತಿಯನ್ನು ನೋಡಿ ಕಲ್ಲೆಸೆಯುವವರು ಇರುತ್ತಾರೆ. ಆದರೆ ಆ ಕಲ್ಲುಗಳನ್ನು ನೀವು ಮನೆ ಕಟ್ಟಲು ಬಳಸಬೇಕು ಎಂದು ಸಲಹೆ ನೀಡಿದರು.

ಗಂಡನನ್ನು ಕಳೆದುಕೊಂಡರೂ ಮಹಿಳೆ ಯಾರ ಹಂಗೂ ಇಲ್ಲದೇ ಮಕ್ಕಳನ್ನು ಬೆಳೆಸಬಲ್ಲಳು. ಆದರೆ ಪತ್ನಿಯನ್ನು ಕಳೆದುಕೊಂಡ ಪತಿಗೆ ಈ ಶಕ್ತಿ ಇಲ್ಲ. ಇನ್ನೊಂದು ಹೆಣ್ಣಿನ ಆಸರೆ ಬೇಕು. ಆದ್ದರಿಂದ ಮಹಿಳೆಗೆ ದೈಹಿಕ ಶಕ್ತಿಯ ಜೊತೆಗೆ ಮಾನಸಿಕ ಶಕ್ತಿಯೂ ಅಗತ್ಯವಿದೆ ಎಂದು.

ಮಹಿಳಾ ಠಾಣೆಯ ಸಬ್ ಇನ್ ಸ್ಪೆಕ್ಟರ್ ಮಾಳಮ್ಮ ಹಾಗೂ ಶಶಿಕಲಾ ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷೆ ಪದ್ಮಜಾರಾವ್, ಗೌರವಾಧ್ಯಕ್ಷೆ ವಸಂಬಾಯಿ ಸಾಬಾಳೆ, ರಾಜ್ಯ ಸ್ಲಂ ಮೋರ್ಚಾ ಕಾರ್ಯದರ್ಶಿ ಕೃಷ್ಣ ಪಿಸಾಳೆ, ಉಪಾಧ್ಯಕ್ಷೆ ಅಂಬಿಕಾ, ಕನ್ನಡಪರ ಹೋರಾಟಗಾರ ವಿಜಯ್ ಜಾಧವ್ ಇದ್ದರು.

# ಬಿಜೆಪಿಯಲ್ಲಿ ದೂರಾಟ

(1ನೇ ಪುಟದಿಂದ) ಕಿಡಿಕಾರಿದ್ದಾರೆ.

ಇಲಾಖೆಗೆ ನೀಡಿದ ಹಣವನ್ನು ಬಳಕೆ ಮಾಡಿಕೊಳ್ಳದಿದ್ದರೆ, ಜನರು ಶಾಸಕರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಮಳೆಗಾಲದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯ ತೆಗೆದುಕೊಳ್ಳುವುದು, ಶಾಸಕರ ಮನವಿ ಸ್ಪಂದಿಸಿ, ಹಣ ಬಿಡುಗಡೆ ಮಾಡಿ ದ್ದೇನೆ. ಇದರಲ್ಲಿ ನನ್ನ ಸ್ವಾರ್ಥವಿಲ್ಲ ಎಂದಿದ್ದಾರೆ. ಅಷ್ಟೇ ಅಲ್ಲ ಈಶ್ವರಪ್ಪ ಅವರ ನಡವಳಿಕೆ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಬೇಕು ಎಂದು ಸಲಹೆ ಮಾಡಿದರು. ಮುಖ್ಯಮಂತ್ರಿಯವರ ಸಲಹೆ ಯಂತೆ ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ್, ಆರೋಗ್ಯ ಸಚಿವ ಸುಧಾಕರ್, ಕೃಷಿ ಸಚಿವ ಬಿ.ಸಿ. ಪಾಟೀಲ್ ಮತ್ತು ಕೆಲವು ಬಿಜೆಪಿ ಶಾಸಕರು ಜಂಟಿ ಸುದ್ದಿಗೋಷ್ಠಿ ನಡೆಸಿ, ಈಶ್ವರಪ್ಪ ಅವರ ನಡೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ ಎಂದರು.

ನಮ್ಮದು ಶಿಸ್ತಿನ ಪಕ್ಷವಾಗಿದ್ದು, ಶಿಸ್ತು ಉಲ್ಲಂಘನೆಯಾಗಬಾರದು. ಈಶ್ವರಪ್ಪ ಅವರಿಗೆ ಯಾವುದೇ ಅಸಮಾಧಾನವಿದ್ದರೆ, ಅದನ್ನು ಸರ್ಕಾರದ ಒಳಗೆ ಬಗೆಹರಿಸಿಕೊಳ್ಳಬೇಕು. ರಾಜ್ಯಪಾಲರ ಅಂಗಳಕ್ಕೆ ಒಯ್ಯುವುದು ಸರಿಯಲ್ಲ ಎಂದರು.

ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿದೆ. ಅವರ ನಾಯಕತ್ವದಲ್ಲೇ ಚುನಾವಣೆ ಎದುರಿಸಿದ್ದೇವೆ. ಅವರ ಮಾರ್ಗದರ್ಶನದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಯಾವುದೇ ಸಮಸ್ಯೆ, ಸಂದೇಹಗಳಿದ್ದರೆ ಸಚಿವ ಸಂಪುಟ ಅಥವಾ ಇತರೆ ವೇದಿಕೆಗಳಲ್ಲಿ ಚರ್ಚೆ ಮಾಡಬಹುದು. ರಾಜ್ಯಪಾಲರ ಬಳಿ ಹೋಗುವ ಹೊಸ ಪದ್ಧತಿ ಸರಿಯಲ್ಲ ಎಂದವರು ಹೇಳಿದ್ದಾರೆ. ಅನುದಾನ ಬಿಡುಗಡೆಯಾಗಿಲ್ಲ ಎಂದು ಶಾಸಕರುಗಳಿಂದ ದೂರು ಬಂದ ಕಾರಣ ಅನುದಾನ ಬೇಗ ಮುಟ್ಟಿಸಲು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಯವರು ಅನುದಾನ ಬಿಡುಗಡೆ ಮಾಡಿದ್ದಾರೆ. ಈಶ್ವರಪ್ಪ ಮತ್ತು ಯಡಿಯೂರಪ್ಪ ಒಟ್ಟಿಗೇ ಕುಳಿತು ಮಾತನಾಡಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದರು.

ಇದಕ್ಕೂ ಮುನ್ನ ದೆಹಲಿಯಲ್ಲಿ ಅರುಣ್‌ಸಿಂಗ್, ಈಶ್ವರಪ್ಪ ಅವರ ನಡೆಯನ್ನು ಟೀಕೆ ಮಾಡಿ, ಮುಖ್ಯಮಂತ್ರಿ ವಿರುದ್ಧ ಬಹಿರಂಗವಾಗಿ ಪತ್ರ ಬರೆಯಬಾರದಿತ್ತು ಎಂದಿದ್ದಾರೆ.

ಏನೇ ಮನಸ್ತಾಪವಿದ್ದರೂ ಸಂಬಂಧಿಸಿದವರ ಜೊತೆ ಚರ್ಚೆ ಮಾಡಬೇಕು, ಪಕ್ಷದ ವೇದಿಕೆಯಲ್ಲಿ ಇಂತಹ ವಿಷಯ ಪ್ರಸ್ತಾಪ ಮಾಡಬೇಕೇ ಹೊರತು ದಿಢೀರನೆ ರಾಜ್ಯಪಾಲರಿಗೆ ದೂರು ನೀಡುವುದು ಸರಿಯಲ್ಲ. ರಾಜ್ಯದಲ್ಲಿ ಉಪಚುನಾವಣೆಗಳು ಮುಗಿದ ನಂತರ ಈ ಬಗ್ಗೆ ಪಕ್ಷ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

# ರಾಷ್ಟ್ರಪತಿ ಆಡಳಿತಕ್ಕೆ ಸಿದ್ದು ಆಗ್ರಹ

(1ನೇ ಪುಟದಿಂದ) ನಾಯಕನಾಗಿ ನಾನು ಮಾಡುತ್ತಾ ಬಂದಿರುವ ಆರೋಪಗಳಿಗೆ ಈಶ್ವರಪ್ಪ ಸಾಕ್ಷಿಗಳನ್ನು ಒದಗಿಸಿದ್ದಾರೆ. ಅವರು ಯಾವುದೇ ಒತ್ತಡಕ್ಕೆ ಮಣಿಯದೇ ಮಾತಿಗೆ ಬದ್ಧರಾಗಿ ಉಳಿಯಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈಶ್ವರಪ್ಪನವರು ತಮ್ಮ ರಾಜಕೀಯ ಜೀವನದಲ್ಲಿ ಮೊದಲ ಬಾರಿ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ರಾಜಕೀಯ ಹಿತಾಸಕ್ತಿಗಿಂತ ರಾಜ್ಯದ ಹಿತಾಸಕ್ತಿ ಮುಖ್ಯ ಎಂದು ಸಾರಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂದವರು ಹೇಳಿದ್ದಾರೆ.

ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಕ್ರಮಗಳು ಕೇವಲ ಗ್ರಾಮೀಣ ಅಭಿವೃದ್ಧಿ ಇಲಾಖೆಯೊಂದಕ್ಕೇ ಸಂಬಂಧಿಸಿದ್ದಲ್ಲ, ಇದು ಸರ್ಕಾರದ ಪ್ರತಿಯೊಂದು ಇಲಾಖೆಯೊಳಗಿನ ಕರ್ಮಕಾಂಡ. ಬಿಜೆಪಿ ವರಿಷ್ಠರು ಈಶ್ವರಪ್ಪನವರ ಬಾಯಿಮುಚ್ಚಿಸಲು ಪ್ರಯತ್ನಿಸದೆ ಇತರೆ ಸಚಿವರೂ ಮುಕ್ತವಾಗಿ ಅಭಿಪ್ರಾಯ ಹಂಚಿಕೊಳ್ಳಲು ಅವಕಾಶ ನೀಡಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಮುಖ್ಯಮಂತ್ರಿಗಳ ವಿರುದ್ಧ ಈಶ್ವರಪ್ಪನವರು ರಾಜ್ಯಪಾಲರಿಗೆ ಮಾತ್ರ ಆರೋಪ ಪಟ್ಟಿ ಸಲ್ಲಿಸದೆ, ಅದರ ಪ್ರತಿಯನ್ನು ಪ್ರಧಾನಿ ಮೋದಿ ಮತ್ತು ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೂ ಕಳಿಸಿದ್ದಾರೆ. ಅವರೆಲ್ಲರೂ ಆರೋಪ ಪಟ್ಟಿ ಬಗ್ಗೆ ತಕ್ಷಣ ಪ್ರತಿಕ್ರಿಯಿಸಿ ಆಂತರಿಕ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿರುವುದಕ್ಕೆ ಕೊರೊನಾ ವೈರಸ್ ಕಾರಣ ಅಲ್ಲ, ಈ ಸರ್ಕಾರಕ್ಕೆ ಅಂಟಿರುವ ಭ್ರಷ್ಟಾಚಾರದ ವೈರಸ್ ಕಾರಣ ಎನ್ನುವುದನ್ನು ಈಶ್ವರಪ್ಪನವರ ತನ್ನ ಸಂಶೋಧನೆ ಮೂಲಕ ಬಹಿರಂಗಗೊಳಿಸಿದ್ದಾರೆ ಎಂದೂ ಅವರು ಹೇಳಿದ್ದಾರೆ.

ನಮ್ಮ ಸರ್ಕಾರ 10 ಪರ್ಸೆಂಟ್ ಸರ್ಕಾರ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದರು. ಈಗ ನಿಮ್ಮದೇ ಸಚಿವರು ನಿಮಗೆ ಕಳಿಸಿರುವ ನಿಮ್ಮ ಸರ್ಕಾರದ ಜಾತಕ ಪತ್ರವನ್ನು ಪರಿಶೀಲಿಸಿ ನೀವೇ ರಾಜ್ಯಸರ್ಕಾರಕ್ಕೆ ಭ್ರಷ್ಟಾಚಾರದ ರೇಟಿಂಗ್ ಕೊಟ್ಟುಬಿಡಿ ಎಂದವರು ಲೇವಡಿ ಮಾಡಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು 'ನಾ ಖಾವುಂಗಾ, ನಾ ಖಾನೆ ದೂಂಗಾ' ಎಂಬ ನಿಮ್ಮ ಜಗದ್ವಿಖ್ಯಾತ ಘೋಷಣೆಯನ್ನು 'ಮೈ ಬಿ ಖಾವೂಂಗಾ, ತುಮ್ ಬಿ ಖಾವೋ' ಎಂದು ಬದಲಿಸಿ ಬಿಡಿ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಆಪರೇಷನ್ ಕಮಲ ಪ್ರಕರಣದ ತನಿಖೆಗೆ ರಾಜ್ಯ ಹೈಕೋರ್ಟ್ ಹಸಿರು ನಿಶಾನೆ ನೀಡಿದೆ. ಇದು ರಾಜ್ಯದ ಬಿಜೆಪಿ ಸರ್ಕಾರ ಆಪರೇಷನ್ ಕಮಲ ಎಂಬ ಅನೈತಿಕ ಚಟುವಟಿಕೆಯ ಅಕ್ರಮ ಶಿಶು ಎನ್ನುವ ನಮ್ಮ ಆರೋಪವನ್ನು ಪುಷ್ಟೀಕರಿಸಿದೆ ಎಂದವರು ಇದೇ ಸಂದರ್ಭದಲ್ಲಿ ಆರೋಪಿಸಿದ್ದಾರೆ.

ರಾಜ್ಯದ ಬಿಜೆಪಿ ಸರ್ಕಾರದ ಅಸ್ತಿತ್ವಕ್ಕೆ ಕಾರಣವಾದ ಆಪರೇಷನ್ ಕಮಲ ಕಾರ್ಯಾಚರಣೆಯಲ್ಲಿ ವಿನಿಮಯಗೊಂಡ ಕೋಟ್ಯಂತರ ರೂಪಾಯಿಗಳ ಆಮಿಷದ ಬಗ್ಗೆ ಸಮಗ್ರ ಸ್ವರೂಪದ ತನಿಖೆ ನಡೆಸಬೇಕು ಎಂದರು.

# ಮಜ್ಜಿಗೆ ವಿತರಣೆಯೂ ಶ್ರೇಷ್ಠ

(1ನೇ ಪುಟದಿಂದ) ಸಾಧನೆಯಾಗಿದೆ. ಇದು ಒಂದು ರೀತಿ ತಪಸ್ಸಿನ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳಿದರು.

ಅನ್ನದ ಪ್ರತಿ ಅಗುಳಿನ ಬೆಲೆ ಬಿತ್ತಿದ ರೈತನಿಗೆ ತಿಳಿದಿದೆ. ಆದರೆ ಜನ ಮದುವೆ ಮತ್ತಿತರೆ ಸಮಾರಂಭಗಳಲ್ಲಿ ಅನ್ನವನ್ನು ಬಿಸಾಡುವುದನ್ನು ಕಾಣುತ್ತಿದ್ದೇವೆ. ಇದನ್ನು ಅರಿತ ಸ್ಫೂರ್ತಿ ಸಂಸ್ಥೆ ಅನ್ನ ವ್ಯರ್ಥವಾಗುವುದನ್ನು ತಡೆದು ಅದು ಬಡವರಿಗೆ ಸಿಗುವಂತೆ ಮಾಡುತ್ತಿದೆ. ಈ ಸಂಸ್ಥೆಯೂ ಸಹ ಮನುಷ್ಯನ ಸೇವೆ ದೇವರ ಸೇವೆ ಎಂಬ ತತ್ವದಡಿ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ದಾವಣಗೆರೆ ಇಸ್ಕಾನ್ ಮುಖ್ಯಸ್ಥ ಅವಧೂತ ಚಂದ್ರಪ್ರಭು ಗುರುಗಳು ಮಾತನಾಡಿ, ವಿಕಾಸ ತರಂಗಿಣಿ ಮತ್ತು ಸ್ಫೂರ್ತಿ ಸೇವಾ ಟ್ರಸ್ಟ್‌ನವರು ನಿಸ್ವಾರ್ಥ ಸೇವೆ ಮಾಡುತ್ತಿದ್ದಾರೆ. ಮಜ್ಜಿಗೆಯನ್ನು ಮನೆಯಿಂದಲೇ ತಯಾರಿಸಿ ತಂದು ಜನರಿಗೆ ಕೊಡುತ್ತಿದ್ದಾರೆ. ಮಜ್ಜಿಗೆಯಿಂದ ಬಂದ ಬೆಣ್ಣೆಯನ್ನು ಈ ಸೇವೆಯಲ್ಲಿ ತೊಡಗಿಸಿಕೊಂಡ ದಾನಿಗಳಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಲಾಕ್‌ಡೌನ್ ಸಂದರ್ಭದಲ್ಲಿ ನಿತ್ಯ ಎರಡು ಸಾವಿರ ಆಹಾರದ ಪೊಟ್ಟಣಗಳನ್ನು ಸಂಕಷ್ಟದಲ್ಲಿದ್ದ ಜನರಿಗೆ ತಲುಪಿಸಲಾಗಿದೆ. ಕೇವಲ ದಾನದಿಂದ ಸಂಪೂರ್ಣತೆ ಕಾಣಲು ಅಸಾಧ್ಯ. ಸೇವೆಯೂ ಮುಖ್ಯ ಎಂದರು.

ವಿಕಾಸ ತರಂಗಿಣಿ ಗೌರವ ಕಾರ್ಯದರ್ಶಿ ಸತ್ಯನಾರಾಯಣ ರಾವ್, ಕಾರ್ಯದರ್ಶಿ ಸಿ.ಹೆಚ್. ಭಾವನಾರಾಯಣ ಮಾತನಾಡಿದರು. 'ಜನತಾವಾಣಿ' ಉಪ ಸಂಪಾದಕ ಇ.ಎಂ. ಮಂಜುನಾಥ ಮತ್ತಿತರರು ಉಪಸ್ಥಿತರಿದ್ದರು.


ಇದೇ ವೇಳೆ ಮಜ್ಜಿಗೆ ವಿತರಣೆಯ ದಾನಿಗಳಾದ ದೇವರಮನೆ ಶಿವಕುಮಾರ್, ಅಜ್ಜಂಪುರ ಶೆಟ್ರು ಮೃತ್ಯುಂಜಯ, ಹೆಚ್.ಆರ್. ಲಿಂಗರಾಜ್, ಬಸವರಾಜ್, ಎಂ. ವೀರಭದ್ರರಾವ್, ಮುರುಳಿ, ಕೆವಿಎಸ್ ಶರ್ಮ, ಬಳ್ಳಾರಿ ಷಣ್ಮುಖಪ್ಪ, ವೆಂಕಟರಾವ್, ಕರಿಬಸಯ್ಯ, ನಾಗರಾಜ ರಾವ್ ಶಾನಭೋಗ್ ಅವರನ್ನು ಗೌರವಿಸಲಾಯಿತು. ಬಿಸಿಲಿನ ತಾಪದಿಂದ ನೀರು ಸಿಕ್ಕರೆ ಸಾಕಪ್ಪಾ ಎಂದುಕೊಳ್ಳುತ್ತಿದ್ದ ಸಾರ್ವಜನಿಕರು ಉಚಿತ ಮಜ್ಜಿಗೆ ಸವಿದು, ಸೇವಾ ಕಾರ್ಯವನ್ನು ಮೆಚ್ಚಿ, ಹರಸಿದರು.

# ಶಸಾಪ ಅಧ್ಯಕ್ಷರಾಗಿ ಗೊರುಚ



ದಾವಣಗೆರೆ, ಏ.1- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಡಾ. ಗೊ.ರು. ಚನ್ನಬಸಪ್ಪ ಬುಧವಾರ ಅಧಿಕಾರ ಸ್ವೀಕರಿಸಿದರು. ಇತ್ತೀಚಿಗೆ ನಡೆದ ಪರಿಷತ್ತಿನ 26ನೇ ಸರ್ವ ಸದಸ್ಯರ ಸಭೆಯಲ್ಲಿ ಪರಿಷತ್ ಗೌರವಾಧ್ಯಕ್ಷರಾದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗದುಗಿನ ಡಾ. ಸಿದ್ದರಾಮ ಸ್ವಾಮೀಜಿಗಳ ಸೂಚನೆ ಮೇರೆಗೆ ಆಜೀವ ಪರ್ಯಂತ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ.

# ಹನಗವಾಡಿಯಲ್ಲಿ ಸಂಭ್ರಮದ ವೀರಭದ್ರ ಸ್ವಾಮಿ ರಥೋತ್ಸವ



ಮಲೇಬೆನ್ನೂರು, ಏ.1- ಹನಗವಾಡಿ ಗ್ರಾಮದ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಗುರುವಾರ ಸಂಜೆ ಸಂಭ್ರಮ ದಿಂದ ಜರುಗಿತು. ವಿವಿಧ ಕಲಾ-ಮೇಳಗಳು ರಥೋತ್ಸವಕ್ಕೆ ಮೆರಗು ತಂದವು.ಪ್ರತಿ ವರ್ಷ ರಾತ್ರಿ 10 ಗಂಟೆಯ ನಂತರ ನಡೆಯುತ್ತಿದ್ದ ರಥೋತ್ಸವವನ್ನು ಈ ಬಾರಿ ಸಂಜೆ ವೇಳೆಗೆ ಹರಿಸಿದ್ದು ವಿಶೇಷವಾಗಿತ್ತು.

ನಾಳೆ ಶುಕ್ರವಾರ ಬೆಳಿಗ್ಗೆ 7.30 ರಿಂದ ಮಧ್ಯಾಹ್ನ 12.30 ರವರೆಗೆ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗಳ ಇರುತ್ತದೆ.

# ಎಂ.ಬಿ.ಪ್ರಿಯಾಗೆ ಮೂರು ಚಿನ್ನದ ಪದಕ



ದಾವಣಗೆರೆ, ಏ. 1- ಈಚೆಗೆ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪವರ್ ಸಿಸ್ಟಮ್ ಎಂಜಿನಿಯರಿಂಗ್ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಬಿಡಿಟಿ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿನಿ ಪ್ರಿಯಾ ಎಂ.ಬಿ. ಅವರು ಪ್ರಥಮ ರ್‍ಯಾಂಕ್‌ನೊಂದಿಗೆ ಮೂರು ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ವಿಶ್ವವಿದ್ಯಾಲಯದ ಘಟಿಕೋತ್ಸವ ಏಪ್ರಿಲ್ 3ರಂದು ಬೆಳಗಾವಿಯಲ್ಲಿ ನಡೆಯಲಿದ್ದು, ಅಂದು ರಾಜ್ಯಪಾಲ ವಜೂಭಾಯಿ ವಾಲಾ ಅವರಿಂದ ಪ್ರಿಯಾ ಪ್ರಶಸ್ತಿ ಪಡೆಯಲಿದ್ದಾರೆ. ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿದ್ದರು. ಪ್ರಸ್ತುತ ಯುಬಿಡಿಟಿಯ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

# ಆದಾಪುರದ ವೀರಭದ್ರಪ್ಪಗೆ ಸನ್ಮಾನ



ಹರಿಹರ, ಏ.1- ತಾಲ್ಲೂಕು ಪಂಚಾಯ್ತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಆದಾಪುರದ ವೀರಭದ್ರಪ್ಪ ಅವರಿಗೆ ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಜಿ.ಬಿ. ಹಾಲೇಶ್ ಗೌಡ್ರು ಗುತ್ತೂರು ಮತ್ತು ಟಿ.ಜಿ. ಮುರುಗೇಶಪ್ಪ ಸನ್ಮಾನಿಸಿ, ಗೌರವಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಕಾಂಗ್ರೆಸ್ ಮುಖಂಡ ಹೆಚ್. ಶಿವಪ್ಪ ಇನ್ನಿತರರು ಹಾಜರಿದ್ದರು.

# ಅಧ್ಯಕ್ಷ ಸ್ಥಾನಕ್ಕೆ ಮಂಜುನಾಥ್ ಕುರ್ಕಿ ನಾಮಪತ್ರ ಸಲ್ಲಿಕೆ

(1ನೇ ಪುಟದಿಂದ) ಮಾತನಾಡಿದ ಸಾಹಿತಿ ಎನ್. ಟಿ ಎರ್ರಿಸ್ವಾಮಿ, ಕ್ರಿಯಾಶೀಲ ವ್ಯಕ್ತಿತ್ವದ ಮಂಜುನಾಥ್ ಕುರ್ಕಿ ಅವರಿಗೆ ಮತ್ತೊಮ್ಮೆ ಗೆಲುವಾಗಲಿ. ಅವರು ಎರಡನೇ ಬಾರಿಗೆ ಸ್ಪರ್ಧಿಸುತ್ತಿರುವುದು ಕೆಲವರಲ್ಲಿ ಅಸಮಾಧಾನ ಇರಬಹುದು. ಆದರೆ ಅವರನ್ನೇ ನಾವು ಮತ್ತೊಮ್ಮೆ ಏಕೆ ಆಯ್ಕೆ ಮಾಡಬೇಕಿದೆ ಎಂಬುದಕ್ಕೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದಾವಣಗೆರೆ ಯಲ್ಲೇ ಆಯೋಜಿಸುವ ಕನಸು ಕಂಡಿರುವ ಕುರ್ಕಿ ಅವರು ಅದಕ್ಕಾಗಿ ಕಳಕಳಿಯಿಂದ ಶ್ರಮಿಸಿದ್ದಾರೆ. ಮತ್ತೆ ಕಲ್ಯಾಣವೆಂಬ ಅದ್ಭುತ ಪರಿಕಲ್ಪನೆಯ ಮೂಲಕ ಸರ್ವ ಜನಾಂಗದ ಶಾಂತಿಯ ತೋಟವಾದ ಸಹಮತ ವೇದಿಕೆಯ ಅಸ್ತಿತ್ವಕ್ಕೆ ಕಾರಣರಾಗಿದ್ದಾರೆ ಎಂದು ಹೇಳಿದರು.

ಕನ್ನಡಪರ ಹೋರಾಟಗಾರ ನಾಗೇಂದ್ರ ಬಂಡೀಕರ್ ಮಾತನಾಡಿ, ದಾವಣಗೆರೆ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಹಿಂದೆಂದಿಗಿಂತಲೂ ಈಗ ವಿಶೇಷವಾದ ಬೆಳವಣಿಗೆ ಮತ್ತು ಅಭಿವೃದ್ಧಿ ಉಂಟಾಗಿದೆ. ನೈಜ ಮತ್ತು ಎಲೆ ಮರೆಯ ಕಾಯಿಯಂತಹ ಸಾಧಕರು, ಸಾಹಿತಿಗಳು, ಕನ್ನಡಾಭಿಮಾನಿಗಳು, ಕಲಾವಿದರು ಹಾಗೂ ಪ್ರತಿಭಾವಂತರನ್ನು ಗುರುತಿಸಿ, ಬೆಳಕಿಗೆ ತಂದು ಅವಕಾಶ ಕಲ್ಪಿಸಿದ ಮಂಜುನಾಥ್ ಅವರ ಸೇವೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮುಂದುವರೆಯಲು ಅವರನ್ನು ಗೆಲ್ಲಿಸಬೇಕಿದೆ ಎಂದರು.

ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಮತ್ತು ಸಾರ್ವಜನಿಕರ ಬಳಿಗೆ ಕೊಂಡೊಯ್ದು ಪರಿಚಯಿಸಿದ ಮಂಜುನಾಥ್ ಅವರನ್ನು ಕಸಾಪ ಮತದಾರರು ಗೆಲ್ಲಿಸಲೇಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಲಕ್ಷ್ಮಣ್, ಮಾಜಿ ಮೇಯರ್ ವಸಂತಕುಮಾರ್, ಪತ್ರಕರ್ತ ಬಿ.ಎನ್. ಮಲ್ಲೇಶ್, ವಿಕರವೇ ಅಧ್ಯಕ್ಷ ಕೆ.ಜಿ. ಯಲ್ಲಪ್ಪ, ಸಾಹಿತಿಗಳಾದ ಪಾಪುಗುರು, ಭಾನುವಳ್ಳಿ ಅಣ್ಣಪ್ಪ, ಕುಂದೂರು ಮಂಜಪ್ಪ, ಓಂಕಾರಯ್ಯ ತವನಿಧಿ, ಕಡದಕಟ್ಟೆ ತಿಮ್ಮಪ್ಪ, ಬಸವರಾಜಪ್ಪ, ಜಿ.ಪಂ. ಮಾಜಿ ಸದಸ್ಯರಾದ ಸಹನಾ ರವಿ, ದಾಗಿನಕಟ್ಟೆ ಪರಮೇಶ್ವರಪ್ಪ, ಗಂಗಾಧರ ಬಿ.ಎಲ್. ನಿಟ್ಟೂರ್, ನ್ಯಾಮತಿ ತಾಲ್ಲೂಕು ಕಸಾಪ ಅಧ್ಯಕ್ಷ ನಿಜಲಿಂಗಪ್ಪ, ಜಗಳೂರು ಕಸಾಪ ಅಧ್ಯಕ್ಷ ಹಜರತ್ ಅಲಿ, ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಡಿ. ಹಾಲಪ್ಪ, ಮಂಜುನಾಥ್ ರೆಡ್ಡಿ, ರೈತ ಮುಖಂಡ ಶಾಮನೂರು ಲಿಂಗರಾಜ್, ಜಿ. ಆರ್. ಷಣ್ಮುಖಪ್ಪ, ವಿಜಯಲಕ್ಷ್ಮಿ ಅಕ್ಕಿ, ಎ.ಕೆ. ಭೂಮೇಶ್ ಹರಿಹರ, ಬಿ. ದಿಳ್ಳೆಪ್ಪ, ಎನ್.ಎಸ್. ರಾಜು, ಹರಿಹರ ಉಮ್ಮಣ್ಣ, ವಿಜಯ ಮಹಾಂತೇಶ್, ಎಂ. ವಿ. ಹೊರಕೆರೆ, ರಾಮಣ್ಣ ಎಸ್. ನಿಟ್ಟೂರು ಸಿದ್ದಪ್ಪ, ಶಿವಾಜಿ ಪಾಟೀಲ್, ಸಿರಿಗೆರೆ ಸಿದ್ದಣ್ಣ, ಮುಚ್ಚನೂರು ನಂಜಪ್ಪ, ಪರಮೇಶ್ವರಪ್ಪ, ನ್ಯಾಮತಿ ಹಾಲಾರಾಧ್ಯ, ವಿಜಯೇಂದ್ರ ಮಹೇಂದ್ರಕರ್, ಜಿ.ಎಂ. ಬಸವರಾಜಪ್ಪ, ತೀರ್ಥಪ್ಪ ಕುಂಬಾರ್, ಯೂನಸ್ ಬಾಷಾ, ಕೆ. ಬಸವರಾಜಪ್ಪ, ಮಂಜುನಾಥ್, ಕೆ. ಶಿವಶಂಕರ್, ಹೆಚ್.ಎನ್. ಶಿವಕುಮಾರ್, ಎಸ್. ಮಲ್ಲಿಕಾರ್ಜುನ್, ಜಿ. ಹೆಚ್. ಲಿಂಗರಾಜ್, ಕೆ. ಷಣ್ಮುಖ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಕೂಡ್ಲಿಗಿಯಲ್ಲಿ ಗಿಡ-ಮರಗಳಿಗೆ ನೀರು



ಕೂಡ್ಲಿಗಿ, ಏ.1- ಪಟ್ಟಣದ ಗೆಳೆಯರ ಬಳಗ ಹಾಗೂ ಜೆಸಿಐ ಗೋಲ್ಡನ್ ಸಂಯುಕ್ತಾಶ್ರಯದಲ್ಲಿ ಬೇಸಿಗೆ ಆರಂಭದ ಹಿನ್ನೆಲೆಯಲ್ಲಿ ರಸ್ತೆ ಬದಿಯ ಗಿಡ-ಮರಗಳಿಗೆ ಟ್ಯಾಂಕರ್ ಮೂಲಕ ನೀರು ಬಿಡಲಾಯಿತು.

# ಒಂದೇ ದಿನ 72 ಸಾವಿರ ಸೋಂಕು

(1ನೇ ಪುಟದಿಂದ) ಮಹಾರಾಷ್ಟ್ರದಲ್ಲಿ ಅತಿ ಹೆಚ್ಚಿನ 227 ಜನ ಸಾವನ್ನಪ್ಪಿದ್ದಾರೆ. ಪಂಜಾಬ್‌ನಲ್ಲಿ 55, ಛತ್ತೀಸ್‌ಘಡದಲ್ಲಿ 39, ಕರ್ನಾಟಕದಲ್ಲಿ 26 ಹಾಗೂ ತಮಿಳುನಾಡಿನಲ್ಲಿ 19 ಜನ ಸಾವನ್ನಪ್ಪಿದ್ದಾರೆ.

2020ರ ಅಕ್ಟೋಬರ್ ನಂತರ ಮೊದಲ ಬಾರಿಗೆ ಒಂದೇ ದಿನ ಇಷ್ಟೊಂದು ಸಂಖ್ಯೆಯ ಸೋಂಕಿತರು ಕಂಡು ಬಂದಿದ್ದಾರೆ. ಅಂದು ಒಂದೇ ದಿನ 74,383 ಜನ ಸೋಂಕಿತರು ಕಂಡು ಬಂದಿದ್ದರು.


## LOSS DOCUMENTS

I, Smt. V. Vijayalakshmi, Davangere my daughter Veeramachineni Jyothi W/o. Vijaykumar anne has 19 sale deed documents, after I have taken GPA from my daughter dated 14.01.2020, and the above sale deed documents are related to Pathan cheru city corporation. 15th ward, pathan cheru city, Medhak dist., Telangana state.

**Sale deed documents original link documents number**


| | | |
|---|---|---|
| 1) | 6594/03-08-2009 | 3687/1981 |
| 2) | 6607/03-08-2009 | 3181/1981 |
| 3) | 6592/03-08-2009 | 4484/1981 |
| 4) | 6596/03-08-2009 | 3000/1981 |
| 5) | 6593/03-08-2009 | 2886/1981 |
| 6) | 6591/03-08-2009 | 326/1981 |
| 7) | 6608/03-08-2009 | 3042/1981 |
| 8) | 6600/03-08-2009 | 4239/1981 |
| 9) | 6599/03-08-2009 | 4240/1981 |
| 10) | 6598/03-08-2009 | 4253/1981 |
| 11) | 6606/03-08-2009 | 5291/1981 |
| 12) | 6601/03-08-2009 | 4233/1981 |
| 13) | 6603/03-08-2009 | 2594/1981 |
| 14) | 6602/03-08-2009 | 4022/1981 |
| 15) | 6604/03-08-2009 | 2596/1981 |
| 16) | 6605/03-08-2009 | 2993/1982 |
| 17) | 7576/27-08-2009 | 4482/1981 |
| | | 4474/1981 |
| | | 4468/1981 |
| 18) | 6597/03-08-2009 | - |
| 19) | 6595/03-08-2009 | - |

The above said 19 documents are lost on date 05.03.2021 at 12.00 pm, at my home while cleaning the house, I have searched the original link documents in my home. I have not found the original link documents.

Anybody finds these document requested to bring them to Vidyanagar Police Station, Davangere and they will be suitably rewarded.

**Smt. V. Vijayalakshmi, Davangere.**
**Contact No. : 99005 59102**


# ಹರಪನಹಳ್ಳಿ ತಾ. ಕುರುಬ ಸಮಾಜದ ಅಧ್ಯಕ್ಷರಾಗಿ ಬಿ. ಗೋಣಿಬಸಪ್ಪ



ಹರಪನಹಳ್ಳಿ, ಏ.1- ತಾಲ್ಲೂಕಿನ ಕುರುಬ ಸಮಾಜದ ಅಧ್ಯಕ್ಷರಾಗಿ ಬಂಡ್ರಿ ಗ್ರಾಮದ ನ್ಯಾಯವಾದಿ ಬಿ. ಗೋಣಿಬಸಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವೈ.ಕೆ.ಬಿ. ದುರುಗಪ್ಪನವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಬಿ. ಗೋಣಿಬಸಪ್ಪ ಆಯ್ಕೆಯಾಗಿದ್ದು, ಗೌರವ ಅಧ್ಯಕ್ಷರಾಗಿ ಕಲ್ಲೇರ ಬಸವರಾಜ್, ಉಪಾಧ್ಯಕ್ಷರಾಗಿ ಬಿ. ವಸಂತಪ್ಪ, ಕಾರ್ಯದರ್ಶಿ ಪರಶುರಾಮ್, ಖಜಾಂಚಿ ಗೋಣಿಬಸಪ್ಪ ಹಾಗೂ ನಿರ್ದೇಶಕರಾಗಿ ಮುತ್ತಿಗಿ ಜಂಬಣ್ಣ ಸೇರಿದಂತೆ 22 ಸದಸ್ಯರನ್ನು ಕಾರ್ಯಕಾರಿ ಮಂಡಳಿಗೆ ಆಯ್ಕೆ ಮಾಡಲಾಯಿತು.

ಜಿ.ಪಂ. ಸದಸ್ಯ ಹೆಚ್.ಬಿ. ಪರಶುರಾಮಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಬೂದಾಳ್ ಮಂಜುನಾಥ, ಪುರಸಭೆ ಸದಸ್ಯರಾದ ಗಣೇಶ, ಭರತೇಶ, ಮುಖಂಡರಾದ ಅಲಮರಸಿಕೇರಿ ಪರುಶುರಾಮ, ಶೆಡ್ಡಿ ಆನಂದಪ್ಪ, ಕುಂಚೂರು ದೇವರಾಜ ಹಾಗು ಇನ್ನಿತರರಿದ್ದರು.

## ಅಮರಾವತಿ ದ್ರಾಕ್ಷಾಯಣಮ್ಮ ನಿಧನ



ಹರಿಹರ ತಾಲ್ಲೂಕು ಅಮರಾವತಿ ಗ್ರಾಮದ ವಾಸಿ ಗಂಗಣ್ಣನವರ ಕಾಶಿನಾಥಪ್ಪನವರ ಪತ್ನಿ ದಾಕ್ಷಾಯಣಮ್ಮ (68) ಇವರು ದಿನಾಂಕ 1.04.2021 ರ ಗುರುವಾರ ಸಂಜೆ 6 ಗಂಟೆಗೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.04.2021 ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಹರಿಹರ ತಾಲ್ಲೂಕು ಅಮರಾವತಿಯ ರುದ್ರಭೂಮಿಯಲ್ಲಿ ನೆರವೇರಲಿದೆ.

## ಟೈಪಿಸ್ಟ್ ಮಹಾಲಕ್ಷ್ಮಿ ನಿಧನ



ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್ 4ನೇ ಮುಖ್ಯ ರಸ್ತೆ, 4ನೇ ತಿರುವಿನ ವಾಸಿ ಕೆ.ಎಂ. ಶ್ರೀನಿವಾಸಮೂರ್ತಿ ಅತ್ವಾರ್ ಅವರ ಧರ್ಮಪತ್ನಿ - ಕೋರ್ಟ್ ಕಾಂಪ್ಲೆಕ್ಸ್ ನ ಟೈಪಿಸ್ಟ್ ಶ್ರೀಮತಿ ಹೆಚ್. ಮಹಾಲಕ್ಷ್ಮಿ (66) ಅವರು ದಿನಾಂಕ 1.4.2021ರ ಗುರುವಾರ ಸಂಜೆ 4.30ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಗುರುವಾರ ರಾತ್ರಿ 9 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನಡೆಯಿತು.

# ದಾವಣಗೆರೆ-ಹರಿಹರ ಅರ್ಬನ್ ಸಹಕಾರಿಗೆ 7.28 ಕೋಟಿ ಲಾಭ

(1ನೇ ಪುಟದಿಂದ) ಕೋಟಿ ರೂ. ಕಾಯ್ದಿಟ್ಟ ಮತ್ತು ಇತರೆ ನಿಧಿಗಳಾಗಿದ್ದು, 275.57 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದೆ. 223.54 ಕೋಟಿ ರೂ. ಸಾಲ ಮತ್ತು ಮುಂಗಡಗಳನ್ನು ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಇಂದು ಸಂಜೆ ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, ಬ್ಯಾಂಕಿನ ಗ್ರಾಹಕರ ಮತ್ತು ಸದಸ್ಯರ ಪ್ರೋತ್ಸಾಹ, ಕಾರ್ಯಕಾರಿ ಮಂಡಳಿ ಸದಸ್ಯರ ಸಲಹೆ - ಸಹಕಾರ, ಸಿಬ್ಬಂದಿ ವರ್ಗದವರ ಶ್ರಮದಿಂದಾಗಿ ಬ್ಯಾಂಕ್ ಈ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಹೇಳಿ, ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಬ್ಯಾಂಕಿನ ಸಿಬ್ಬಂದಿಗಳಿಗೆ ಗ್ರೂಪ್ ಹೆಲ್ತ್ ಇನ್ಸೂರೆನ್ಸ್ ಮಾಡಿಸಲಾಗಿದೆ. ಬ್ಯಾಂಕಿನ ಸದಸ್ಯರು ಮತ್ತು ಗ್ರಾಹಕರಿಗೆ ಶೀಘ್ರ ಸೇವೆ ಒದಗಿಸುವ ನಿಟ್ಟಿನಲ್ಲಿ ಎಟಿಎಂ ಕಾರ್ಡುಗಳನ್ನು ವಿತರಿಸಲಾಗುತ್ತಿದೆ. ಬ್ಯಾಂಕಿನ ಆಡಳಿತ ಕಚೇರಿ ಮುಂಭಾಗದಲ್ಲಿ ಎಟಿಎಂ ಸ್ಥಾಪಿಸಲಾಗಿದ್ದು, ಸದ್ಯದಲ್ಲೇ ಗ್ರಾಹಕರ ಸೇವೆಗೆ ಸಮರ್ಪಿಸಲಾಗುವುದು.

> ಬ್ಯಾಂಕಿನ ಸದಸ್ಯರ ಆರೋಗ್ಯದ ದೃಷ್ಟಿಯಿಂದ ಸ್ಥಾಪಿಸಿರುವ ಆರಾಧ್ಯ ಆಯುಷ್ಮಾನ್ ನಿಧಿಯಿಂದ ಚಿಕಿತ್ಸಾ ವೆಚ್ಚ ನೀಡಲಾಗುತ್ತಿದ್ದು, ಸದರಿ ಸಾಲಿನಲ್ಲಿ 74 ಸದಸ್ಯ ಫಲಾನುಭವಿಗಳು ವಿವಿಧ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚ 11.04 ಲಕ್ಷ ರೂ.ಗಳನ್ನು ಸಂಬಂಧಿಸಿದ ಆಸ್ಪತ್ರೆಗಳಿಗೆ ನೇರವಾಗಿ ಪಾವತಿಸಲಾಗಿದೆ.
>
> **-ಎನ್.ಎ. ಮುರುಗೇಶ್**, ಅಧ್ಯಕ್ಷರು

ಬ್ಯಾಂಕಿಂಗ್ ವ್ಯವಹಾರವನ್ನು ಡಿಜಿಟಲೈಜ್ ಮಾಡುವ ಉದ್ದೇಶ ಹೊಂದಿದ್ದು, ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯನ್ನೂ ಸಹ ಗ್ರಾಹಕರಿಗೆ ಶೀಘ್ರ ಒದಗಿಸಲಾಗುವುದು. ಬ್ಯಾಂಕಿನ ಆಡಳಿತ ಕಚೇರಿ ಮೇಲ್ಭಾಗದಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಲಾಗಿದೆ. ತನ್ನದೇ ಆದ ವಿದ್ಯುತ್ ಉತ್ಪಾದನಾ ಘಟಕದಿಂದಾಗಿ ಬ್ಯಾಂಕಿನ ವಿದ್ಯುಚ್ಛಕ್ತಿ ವೆಚ್ಚವನ್ನು ಕಡಿತಗೊಳಿಸಿದಂತಾಗಿದೆ. ಇದೇ ರೀತಿ ಬ್ಯಾಂಕಿನ ಹರಿಹರ ಶಾಖೆಯ ಕಟ್ಟಡದ ಮೇಲ್ಭಾಗದಲ್ಲೂ ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಮುರುಗೇಶ್ ವಿವರಿಸಿದ್ದಾರೆ.

ಬ್ಯಾಂಕಿನ ಉಪಾಧ್ಯಕ್ಷ ಕಿರುವಾಡಿ ವಿ. ಸೋಮಶೇಖರ್, ನಿರ್ದೇಶಕರುಗಳಾದ ರಮಣ್ ಲಾಲ್ ಪಿ.ಸಂಘವಿ, ಎಸ್.ಕೆ. ವೀರಣ್ಣ, ಎ.ಹೆಚ್. ಕುಬೇರಪ್ಪ, ಶ್ರೀಮತಿ ಜಯಮ್ಮ ಪರಶುರಾಮಪ್ಪ, ಶಂಕರ್ ಖಟಾವ್ ಕರ್, ಎಸ್.ಕೆ. ಪ್ರಭು ಪ್ರಸಾದ್, ಶ್ರೀಮತಿ ಶಶಿಕಲಾ ರುದ್ರಯ್ಯ, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ.ನಾಗೇಂದ್ರಚಾರಿ, ಕೆ.ಹೆಚ್. ಶಿವಯೋಗಪ್ಪ, ಶ್ರೀಮತಿ ಅನಿಲ ಇಂದೂಧರ್ ನಿಶಾನಿಮಠ, ಆರ್.ವಿ. ಶಿರಸಾಲಿಮಠ್, ಕಿರಣ್ ಶೆಟ್ಟಿ, ವಿಶೇಷ ಆಹ್ವಾನಿತರಾದ ಜಿ.ಕೆ. ವೀರಣ್ಣ, ಶ್ರೀಮತಿ ಉಮಾ ವಾಗೀಶ್, ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಕೆ.ಎಂ. ಬಸವರಾಜ್, ಶ್ರೀಮತಿ ಜೆ.ಸಿ. ವಸುಂಧರಾ, ಶ್ರೀಮತಿ ಕೆ.ಎಂ. ಶೈಲಾ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಪಕ ಎಂ. ಶಿವಲಿಂಗಸ್ವಾಮಿ ಅವರು ಸಭೆಯ ಕಾರ್ಯಕಲಾಪವನ್ನು ನಿರ್ವಹಿಸಿದರು.

# ಅಕ್ರಮ ದಾಸ್ತಾನು: ಸ್ಫೋಟಕಗಳ ವಶ, ಓರ್ವನ ಬಂಧನ

ದಾವಣಗೆರೆ, ಏ.1- ಅಕ್ರಮವಾಗಿ ಬಂಡೆ ಸ್ಫೋಟಿಸಲು ಸ್ಫೋಟಕಗಳ ದಾಸ್ತಾನು ಮಾಡಿದ್ದ ಜಮೀನಿನ ಮೇಲೆ ದಾಳಿ ನಡೆಸಿ, ಓರ್ವನನ್ನು ಸಂತೆಬೆನ್ನೂರು ಪೊಲೀಸರು ಬಂಧಿಸಿದ್ದಾರೆ.

ಚನ್ನಗಿರಿ ತಾಲ್ಲೂಕು ಕೆರೆಬಿಳಚಿ ಗ್ರಾಮದ ವ್ಯಾಪಾರಿ ಫರ್ವಿಜ್ ಬಂಧಿತನು. ದಾಳಿ ವೇಳೆ ಮತ್ತೋರ್ವ ಆರೋಪಿ ಗಿರೀಶ ಪರಾರಿಯಾಗಿದ್ದು, ಪತ್ತೆ ಕಾರ್ಯ ಮುಂದುವರೆದಿದೆ.

ಕಾಶೀಪುರ ಕ್ಯಾಂಪ್ ಸರ್ವೆ ನಂಬರ್ 20/6 ರ ಜಮೀನಿನಲ್ಲಿ ಬಂಡೆಯನ್ನು ಅಕ್ರಮವಾಗಿ ಸ್ಫೋಟಿಸಲು ಸ್ಫೋಟಕ ಸಾಮಗ್ರಿಗಳನ್ನು ಯಾವುದೇ ಪರವಾನಿಗೆ ಇಲ್ಲದೆ ದಾಸ್ತಾನು ಮಾಡಲಾಗಿತ್ತು. ಜನವರಿ 30 ರಂದು ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್, ಚನ್ನಗಿರಿ ಡಿವೈಎಸ್ಪಿ ಬಿ.ಎಸ್.ಬಸವರಾಜ್, ಸಿಪಿಐ ಆರ್.ಆರ್. ಪಾಟೀಲ್ ಮಾರ್ಗದರ್ಶನದಲ್ಲಿ ಸಂತೇಬೆನ್ನೂರು ಪೊಲೀಸ್ ಠಾಣೆಯ ಪಿಎಸ್ಐ ಶಿವರುದ್ರಪ್ಪ ಎಸ್. ಮೇಟಿ ಹಾಗೂ ಸಿಬ್ಬಂದಿಗಳಾದ ಡಿ. ನಿಂಗಣ್ಣ, ನಾಗರಾಜನಾಯ್ಕ, ಪ್ರಹ್ಲಾದ, ಆಂಜನೇಯ, ಸೋಮಶೇಖರ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಎಎಸ್ಸಿ ತಂಡದ ಸಿದ್ದೇಶ, ಎಸ್.ಎಸ್. ನಾಗರಾಜ್ ಮತ್ತು ರಾಘವೇಂದ್ರ ಒಳಗೊಂಡ ತಂಡ ದಾಳಿ ನಡೆಸಿದೆ. ದಾಸ್ತಾನು ಮಾಡಿದ್ದ 8 ಜಿಲಿಟಿನ್ ಕಡ್ಡಿ, ಒಂದು ಜೀವಂತ ಎಲೆಕ್ಟ್ರಿಕಲ್ ಡೇಟೋನೇಟರ್, ಸುಮಾರು 30 ಮೀಟರ್ ತಂತಿ, ಒಂದು ಮೆಗ್ಗರ್ ಮಿಷನ್ ಸೇರಿದಂತೆ ಸ್ಫೋಟಕಕ್ಕೆ ಸಂಬಂಧಿಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಸಂತೇಬೆನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಬಂಧಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಜಿನ ಮಂದಿರದಲ್ಲಿ ಮಹಿಳಾ ದಿನಾಚರಣೆ



ದಾವಣಗೆರೆ, ಏ.1 - ಪದ್ಮಾಂಭ ಮಹಿಳಾ ಸಮಾಜದ ವತಿಯಿಂದ ಭಗವಾನ್ ಆದಿನಾಥ ಜಿನ ಮಂದಿರದಲ್ಲಿ ವಿಶ್ವ ಮಹಿಳಾ ದಿನ ಆಚರಿಸಲಾಯಿತು.

ದಿಗಂಬರ ಜೈನ ಸಮಾಜದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸೇವೆಗೈದ ಪದ್ಮಾಪ್ರಕಾಶ್, ಹರ್ಷ ನಾಗರಾಜ್, ಚೇತನಾ ಪದ್ಮರಾಜ್ ಅವರಿಗೆ ಸಾಧನಾ ಪ್ರಶಸ್ತಿ ನೀಡಲಾಯಿತು. ಕವಿತಾ ಧರಣೇಂದ್ರ ಅಧ್ಯಕ್ಷತೆ ವಹಿಸಿದ್ದರು. ಉಷಾ, ಜಯಪ್ರಕಾಶ್, ಮಮತ ಸಂಪತ್, ವರ್ಷ ಹುಲಿ, ಕುಸುಮಾ ಸುನೀಲ್, ಸುಷ್ಮ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

## ಇಂದು ಕವನ ಸಂಕಲನ ಬಿಡುಗಡೆ

ಸುಕೃತಿ ಪ್ರಕಾಶನ ದಾವಣಗೆರೆ, ದಿ. ಡಿ.ಜಿ. ಪುಟ್ಟರಾಜು ಗೆಳೆಯರ ಬಳಗ ಇವರುಗಳ ಆಶ್ರಯದಲ್ಲಿ ಹೆಚ್. ವಿವೇಕಾನಂದ ಸ್ವಾಮಿಯವರ 'ಬೆಳದಿಂಗಳ ಬೆಳಕಿನಲಿ' ಕವನ ಸಂಕಲನ ಬಿಡುಗಡೆ. ಸಮಯ : ಸಂಜೆ 6 ಕ್ಕೆ. ಸ್ಥಳ : ರೋಟರಿ ಬಾಲಭವನ. ಕವನ ಸಂಕಲನ ಬಿಡುಗಡೆ: ಡಾ|| ಲಿಂಗರಾಜ ರಾಮಾಪುರ. ಕವನ ಸಂಕಲನ ಕುರಿತು: ಡಾ|| ಸಿದ್ದಪ್ಪ ಬಿ. ಕಕ್ಕಳಮೇಲಿ. ಅಧ್ಯಕ್ಷತೆ : ಓಂಕಾರಯ್ಯ ತವನಿಧಿ. ಅತಿಥಿಗಳು : ಕಲಿವೀರ ಕಳ್ಳಿಮನಿ, ಹೆಚ್.ಚಂದ್ರಪ್ಪ, ಪ್ರತಿಭಾ ಪಿ. ದೊಗ್ಗಳ್ಳಿ, ಎ.ಹೆಚ್.ವಿವೇಕಾನಂದ ಸ್ವಾಮಿ, ಕೆ.ಎಂ.ವಜಜಾಕ್ಷಿ.

## ಬಿಐಇಟಿ ಕಾಲೇಜಿಗೆ 10 ರ್‍ಯಾಂಕ್‌ಗಳು

ದಾವಣಗೆರೆ,ಏ. 1- ನಗರದ ಬಿಐಇಟಿ ಕಾಲೇಜು ವಿದ್ಯಾರ್ಥಿಗಳು ಈಚೆಗೆ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ 2019-20ನೇ ವರ್ಷದ ಪರೀಕ್ಷೆಗಳಲ್ಲಿ 10 ರ್‍ಯಾಂಕ್ ಗಳಿಸಿದ್ದಾರೆ.

ಬಿಇ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಕೆ.ಎಂ. ಐಶ್ವರ್ಯ 10ನೇ ರ್‍ಯಾಂಕ್, ಜವಳಿ ವಿಭಾಗದಲ್ಲಿ ಪ್ರಶಾಂತ್ 2ನೇ ರ್‍ಯಾಂಕ್, ಎಸ್. ಸೌಂದರ್ಯ 3ನೇ ರ್‍ಯಾಂಕ್, ವಿನುತಾ ವಿ. ಪುರೋಹಿತ್ 4ನೇ ರ್‍ಯಾಂಕ್, ನೇಹಾ ಪಿ. ಪೂಜಾರ್ 5ನೇ ರ್‍ಯಾಂಕ್ ಮತ್ತು ಪ್ರಜ್ವಲ್ ಹೆಚ್.ಎಂ. 8ನೇ ರ್‍ಯಾಂಕ್ ಪಡೆದಿರುತ್ತಾರೆ.

ಸಿವಿಲ್ ಎಂ.ಟೆಕ್ ಸ್ಟ್ರಕ್ಚರ್ ವಿಭಾಗದಲ್ಲಿ ಸುಪ್ರಿಯಾ ಕ್ಸೇವಿಯರ್ ಲೋಪೇಸ್ 2ನೇ ರ್‍ಯಾಂಕ್, ಶ್ರೀನಿಧಿ ಉಪಾಧ್ಯಾಯ 7ನೇ ರ್‍ಯಾಂಕ್ ಮತ್ತು ಮೇಘಾ ಕೆ. ಹಳ್ಳಿಕೇರಿ 10ನೇ ರ್‍ಯಾಂಕ್ ಪಡೆದಿದ್ದರೆ, ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಟಿ. ಹುಲಿಗೇಶ್ 4ನೇ ರ್‍ಯಾಂಕ್ ಪಡೆದಿರುತ್ತಾರೆ.

# ದೊಡ್ಡ ಕನಸು ಕಾಣಿರಿ, ಕನಸು ನನಸಾಗಿಸಲು ಶ್ರಮಿಸಿ

### ತರಳಬಾಳು ಕಾಲೇಜಿನ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಆದರ್ಶ ಗೋಖಲೆ



ದಾವಣಗೆರೆ, ಏ. 1- ಜೀವನದ ಗುರಿ ಬೃಹತ್ತಾಗಿರಲಿ, ಸಾಧನೆಗೆ ಅಸಾಧ್ಯವಾದುದು ಗೊತ್ತಿಲ್ಲ ಎನ್ನಿರಿ. ದೊಡ್ಡ ಕನಸು ಕಾಣಿರಿ. ಅದನ್ನು ನನಸಾಗಿಸಲು ಶ್ರಮಿಸಬೇಕು. ಸಾಧನೆ ತಪಸ್ಸಿನ ಫಲ. ನಾವುಗಳು ನಮ್ಮ ಜೀವನದಲ್ಲಿ ಶ್ರದ್ಧೆಯಿಂದ ಕಾರ್ಯೋನ್ಮುಖ ರಾಗಿ ಸಾಧನೆಯನ್ನು ಮಾಡಬೇಕು ಎಂದು ಆದರ್ಶ ಗೋಖಲೆ ತಿಳಿಸಿದರು.

ಅವರು ನಗರದ ತರಳಬಾಳು ಪಿಯು ಕಾಲೇಜಿನಲ್ಲಿ ಜೆ.ಇ.ಇ. ಮತ್ತು ನೀಟ್ ಬಗ್ಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸ್ಫೂರ್ತಿದಾಯಕ ಉಪನ್ಯಾಸ ನೀಡಿದರು.

ಮುಂದುವರೆದು ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯು ಜೀವನದಲ್ಲಿ ಕನಸು ಕಾಣುವುದಷ್ಟೆಯಲ್ಲ ಆ ಕನಸುಗಳನ್ನು ನನಸು ಮಾಡಲು ಜಾಗೃತರಾಗಿ ರುವುದು ಅತಿ ಅವಶ್ಯಕವಾಗಿದೆ.

ವಿದ್ಯಾರ್ಥಿ ಜೀವನದ ಮಹತ್ವಪೂರ್ಣ ಘಟ್ಟ ಪದವಿ ಪೂರ್ವ ಶಿಕ್ಷಣದ ಹಂತವಾಗಿರುತ್ತದೆ. ಆದ ಕಾರಣ ವಿದ್ಯಾರ್ಥಿಗಳು ಈ ಹಂತದಲ್ಲಿ ಬಾಹ್ಯ ಆಕರ್ಷಣೆಗಳಿಗೆ ಒಳಗಾಗದೆ ವಿದ್ಯಾರ್ಜನೆಯಲ್ಲಿ ತೊಡಗಿಸಿಕೊಂಡು ಗುರಿಯನ್ನು ತಲುಪಿ ಯಶಸ್ಸನ್ನು ಗಳಿಸಲು ಪ್ರಯತ್ನಿಸಬೇಕು ಎಂದರು.

ಯೋಗ ಹಾಗೂ ಪ್ರಾಣಾಯಾಮದ ಮಹತ್ವ ತಿಳಿಸಿ ಶ್ರೀ ತರಳಬಾಳು ಜಗದ್ಗುರು ಗುರು ಪರಂಪರೆಯನ್ನು ಸ್ಮರಿಸುತ್ತಾ ಆದರ್ಶ ಗೋಖಲೆ ಮಹತ್ವಪೂರ್ಣ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ. ಎಸ್. ಷಣ್ಮುಖಪ್ಪ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಹೆಚ್.ಎನ್. ಪ್ರದೀಪ್ ಪುನ್ನಯ್ಯ ಚೌಧರಿ, ಉಪನ್ಯಾಸಕ ವರ್ಗ ಸಿಬ್ಬಂದಿ ವರ್ಗದವರು, ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕನ್ನಡ ಉಪನ್ಯಾಸಕ ಬಿ. ಆನಂದ್ ಕಾರ್ಯಕ್ರಮ ನಿರೂಪಿಸಿದರು.

# ಜಿ.ಪಂ. ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವಿಂಗಡಣೆ

**ರಾಜ್ಯ ಚುನಾವಣಾ ಆಯೋಗವು ದಾವಣಗೆರೆ ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶವನ್ನು 34 ಏಕ ಸದಸ್ಯ ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಆದೇಶ ಹೊರಡಿಸಲಾಗಿದೆ.**

| | |
|---|---|
| **ದಾವಣಗೆರೆ ತಾಲ್ಲೂಕು** | |
| 1. ದೊಡ್ಡಬಾತಿ : | ದೊಡ್ಡಬಾತಿ, ಹಳೇಬಾತಿ, ಕಕ್ಕರಗೊಳ್ಳ, ಕಡ್ಲೆಬಾಳು, ಆವರಗೊಳ್ಳ. |
| 2. ಬೇತೂರು (ಅಣಜಿ) : | ಬೇತೂರು, ಕಾಡಜ್ಜಿ, ಆಲೂರು, ಶ್ರೀರಾಮನಗರ, ಅಣಜಿ, ಬಸವನಾಳ್, ಐಗೂರು. |
| 3. ಆನಗೋಡು : | ಆನಗೋಡು, ನೇರ್ಲಿಗೆ, ಗುಡಾಳು, ಕಂದನಕೋವಿ, ಹುಲಿಕಟ್ಟೆ, ಹೆಮ್ಮನಬೇತೂರು. |
| 4. ಬೆಳವನೂರು : | ಬೆಳವನೂರು, ತೋಳಹುಣಸೆ, ಹೊನ್ನೂರು, ಕುರ್ಕಿ |
| 5. ಹದಡಿ : | ಹದಡಿ, ಮುದಹದಡಿ, ಶಿರಮಗೊಂಡನಹಳ್ಳಿ, ಕನಗೊಂಡನಹಳ್ಳಿ, ಕುಕ್ಕುವಾಡ |
| 6. ಲೋಕಿಕೆರೆ : | ಲೋಕಿಕೆರೆ, ಕೈದಾಳೆ, ಗೋಪನಾಳ್, ಅತ್ತಿಗೆರೆ, ಕೊಡಗನೂರು. |
| 7. ಮಾಯಕೊಂಡ : | ಮಾಯಕೊಂಡ, ಹುಚ್ಚವ್ವನಹಳ್ಳಿ, ನರಗನಹಳ್ಳಿ, ಹೆಬ್ಬಾಳ್ |
| 8. ಕಂದಗಲ್ಲು (ಬಾಡ) : | ಕಂದಗಲ್ಲು, ಬಾಡ, ಅಣಬೇರು, ಶ್ಯಾಗಲೆ, ಮತ್ತಿ, ಮಳಲ್ಕೆರೆ, |
| **ಹರಿಹರ ತಾಲ್ಲೂಕು** | |
| 9. ಕೊಂಡಜ್ಜಿ : | ಕೊಂಡಜ್ಜಿ, ಸಾರಥಿ, ರಾಜನಹಳ್ಳಿ, ಹನಗವಾಡಿ |
| 10. ಬೆಳ್ಳೂಡಿ : | ಬೆಳ್ಳೂಡಿ, ಬನ್ನಿಕೋಡು, ಕೆ.ಬೇವಿನಹಳ್ಳಿ, ದೇವರಬೆಳಕೆರೆ, ಸಾಲಕಟ್ಟೆ |
| 11. ಭಾನುವಳ್ಳಿ : | ಭಾನುವಳ್ಳಿ, ಯಲವಟ್ಟಿ, ಜಿಗಳಿ, ನಂದಿಗಾವಿ |
| 12. ಸಿರಿಗೆರೆ : | ಸಿರಿಗೆರೆ, ಎಳೆಹೊಳೆ, ಉಕ್ಕಡಗಾತ್ರಿ, ವಾಸನ, ಕೊಕ್ಕನೂರು, ಕಡರನಾಯಕನಹಳ್ಳಿ |
| 13. ಕುಂಬಳೂರು : | ಕುಂಬಳೂರು, ಕುಣಿಬೆಳಕೆರೆ, ಹರಳಹಳ್ಳಿ, ಹಾಲಿವಾಣ |
| **ಜಗಳೂರು ತಾಲ್ಲೂಕು** | |
| 14. ಅಸಗೋಡು : | ಅಸಗೋಡು, ಪಲ್ಲಾಗಟ್ಟೆ, ದಿದ್ದಿಗೆ, ದೇವಿಕೆರೆ |
| 15. ಬಿಳಿಚೋಡು : | ಬಿಳಿಚೋಡು, ಆಲೇಕಲ್ಲು, ಗುತ್ತಿದುರ್ಗ, ಬಿಸ್ತುವಳ್ಳಿ. |
| 16. ಸೊಕ್ಕೆ : | ಸೊಕ್ಕೆ, ಬಸವನಕೋಟೆ, ಗುರುಸಿದ್ಧಾಪುರ, ಹೊಸಕೆರೆ, ಕೆಚ್ಚೇನಹಳ್ಳಿ |
| 17. ಅಣಬೂರು : | ಅಣಬೂರು, ಕ್ಯಾಸನಹಳ್ಳಿ, ಹಣಮಂತಾಪುರ, ಹಿರೇಮಲ್ಲನಹೊಳೆ |
| 18. ಬಿದರಕೆರೆ (ದೊಣ್ಣೆಹಳ್ಳಿ) : | ಬಿದರಕೆರೆ, ದೊಣ್ಣೆಹಳ್ಳಿ, ಮುಷ್ಟೂರು, ಕಲ್ಲದೇವರಪುರ, ತೋರಣಗಟ್ಟೆ |
| **ಚನ್ನಗಿರಿ ತಾಲ್ಲೂಕು** | |
| 19. ಹೊಸಕೆರೆ (ಬಸವಾಪಟ್ಟಣ) : | ಹೊಸಕೆರೆ, ಕೋಟೆಹಾಳು, ಬೆಳಲಗೆರೆ, ಕಂಸಾಗರ, ಕತ್ತಲಗೆರೆ, ಕಾರಿಗನೂರು |
| 20. ಕೆರೆಬಿಳಚಿ (ತ್ಯಾವಣಿಗಿ) : | ಕೆರೆಬಿಳಚಿ, ಚಿರಡೋಣಿ, ಕಣಿವೆಬಿಳಚಿ, ನವಿಲೇಹಾಳು, ತ್ಯಾವಣಗಿ, ನಲ್ಕುದುರೆ |
| 21. ಕರೇಕಟ್ಟೆ (ಕೋಗಲೂರು) : | ಕರೇಕಟ್ಟೆ, ಮಲ್ಲಾಪುರ, ಕಬ್ಬಳ, ಕೆಂಪನಹಳ್ಳಿ, ಕೋಗಲೂರು, ಬೆಳ್ಳಿಗನೂಡು, ತಣಿಗೆರೆ, ಮೆದಿಕೆರೆ |
| 22. ಸಂತೇಬೆನ್ನೂರು : | ಸಂತೇಬೆನ್ನೂರು, ಕಾಕನೂರು, ಕೊಂಡದಹಳ್ಳಿ, ಸೋಮಲಾಪುರ, ದೊಡ್ಡಬ್ಬಿಗೆರೆ, ಸಿದ್ದನಮಠ |
| 23. ನಲ್ಲೂರು : | ನಲ್ಲೂರು, ದಾಗಿನಕಟ್ಟೆ, ನಿಲೋಗಲ್ಲು, ರುದ್ರಾಪುರ, ಲಿಂಗದಹಳ್ಳಿ, ಗುಡ್ಡದಕೊಮಾರನಹಳ್ಳಿ |
| 24. ಅಗರಬನ್ನಿಹಟ್ಟಿ : | ಅಗರಬನ್ನಿಹಟ್ಟಿ, ಹಿರೇಮಳಲಿ, ಇಟ್ಟಿಗೆ, ಬುಳಸಾಗರ, ಮುದಿಗೆರೆ, ಅಜ್ಜಿಹಳ್ಳಿ |
| 25. ದೇವರಹಳ್ಳಿ (ಹೊದಿಗೆರೆ) : | ದೇವರಹಳ್ಳಿ, ಚಿಕ್ಕಗಂಗೂರು, ಕೊರಟಿಕೆರೆ, ನುಗ್ಗಿಹಳ್ಳಿ, ಕಗತೂರು, ಹೊದಿಗೆರೆ, ಹೆಬ್ಬಳಗೆರೆ |
| 26. ಪಾಂಡೋಮಟ್ಟಿ (ಹೊನ್ನೇಬಾಗಿ) : | ಪಾಂಡೋಮಟ್ಟಿ, ಚನ್ನೇಶಪುರ, ಜೋಳದಾಳು, ಹರೋನಹಳ್ಳಿ, ತಿಪ್ಪಗೊಂಡನಹಳ್ಳಿ, ಗರಗ, ಹೊನ್ನೇಬಾಗಿ, ರಾಜಗೊಂಡನಹಳ್ಳಿ |
| 27. ತಾವರಕೆರೆ : | ತಾವರಕೆರೆ, ದುರ್ವಿಗೆರೆ, ಗೊಪ್ಪೇನಹಳ್ಳಿ, ಕಂಚಿಗನಾಳು, ವಡ್ನಾಳು, ಮರವಂಜಿ, ಮಲಹಾಳು, ನೆಲ್ಲಿಹಂಕ್ಲು |
| **ಹೊನ್ನಾಳಿ ತಾಲ್ಲೂಕು** | |
| 28. ಬೇಲಿಮಲ್ಲೂರು : | ಬೇಲಿಮಲ್ಲೂರು, ಹಿರೇಗೋಣಿಗೆರೆ, ಅರಕೆರೆ, ಮಾಸಡಿ, ಬೆನಕನಹಳ್ಳಿ, ಬೀರಗೊಂಡನಹಳ್ಳಿ, ಕಮ್ಮಾರಗಟ್ಟೆ |
| 29. ಕುಂದೂರು : | ಕುಂದೂರು, ಯಕ್ಕನಹಳ್ಳಿ, ತಿಮ್ಲಾಪುರ, ಕೂಲಂಬಿ, ಬನ್ನಿಕೋಡು, ಮುಕ್ತೇನಹಳ್ಳಿ, ಕುಂಬಳೂರು |
| 30. ಸಾಸ್ವೇಹಳ್ಳಿ : | ಸಾಸ್ವೇಹಳ್ಳಿ, ರಾಂಪುರ, ಹೊಸಹಳ್ಳಿ, ಲಿಂಗಾಪುರ, ಕ್ಯಾಸಿನಕೆರೆ, ಕುಳಗಟ್ಟೆ, ಹುಣಸಘಟ್ಟ |
| 31. ಸೊರಟೂರು : | ಸೊರಟೂರು, ಹೆಚ್.ಗೋಪಗೊಂಡನಹಳ್ಳಿ, ಹನುಮಸಾಗರ, ಹತ್ತೂರು, ಕತ್ತಿಗೆ, ಹರಳಹಳ್ಳಿ, ಹೆಚ್.ಕಡದಕಟ್ಟೆ, ಅರಬಗಟ್ಟೆ |
| 32. ಬೆಳಗುತ್ತಿ : | ಬೆಳಗುತ್ತಿ, ಕೆಂಚಿಕೊಪ್ಪ, ಗುಡ್ಡೆಹಳ್ಳಿ, ಯರಗನಾಳು, ಸುರಹೊನ್ನೆ |
| 33. ಚೀಲೂರು ; | ಚೀಲೂರು, ಗೋವಿನಕೋವಿ, ಬಸವನಹಳ್ಳಿ, ಬೇಲೂರು, ಕಡದಕಟ್ಟೆ, ಟಿ.ಗೋಪಗೊಂಡನಹಳ್ಳಿ, ಗಂಗನಕೋಟೆ |
| 34. ಜೋಗ : | ಸವಳಂಗ, ಚಟ್ನಹಳ್ಳಿ, ಫಲವನಹಳ್ಳಿ, ಕುಂಕುವಾ, ಚಿನ್ನಿಕಟ್ಟೆ, ವಡೇಯರಹತ್ತೂರು |

## ಹೊನ್ನಾಳಿ ತಾ.ನಲ್ಲಿ 60 ಕೋವಿಡ್ ಸೋಂಕಿತರ ಸಾವು: ಡಾ. ಕೆಂಚಪ್ಪ



ಹೊನ್ನಾಳಿ, ಏ.1- ಹೊನ್ನಾಳಿ ತಾಲ್ಲೂಕು ಹಾಗೂ ನ್ಯಾಮತಿ ತಾಲ್ಲೂಕುಗಳಲ್ಲಿ ಈವರೆಗೆ 8,064 ಕೋವಿಡ್ ಲಸಿಕೆಗಳನ್ನು ನೀಡಿದ್ದು 2,701 ಪಾಸಿಟಿವ್ ಪ್ರಕರಣಗಳು ದಾಖಲಾಗಿದ್ದವು. ಇಲ್ಲಿಯವರೆಗೆ 60 ಜನ ಕೋವಿಡ್ ಸೋಂಕಿತರು ಸಾವನ್ನಪ್ಪಿರುವುದಾಗಿ ಆರೋಗ್ಯಾಧಿಕಾರಿ ಡಾ.ಕೆಂಚಪ್ಪ ತಿಳಿಸಿದರು.

ಅವರು ಕಿತ್ತೂರು ರಾಣಿ ಚೆನ್ನಮ್ಮ ಸಮುದಾಯ ಭವನದಲ್ಲಿಂದು ಉಪ ಕೇಂದ್ರ ಮಟ್ಟದ ಲಸಿಕಾ ಕೇಂದ್ರ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ತಾಲ್ಲೂಕಿನ 6 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 28 ಉಪ ಕೇಂದ್ರಗಳಲ್ಲಿ ಹಾಗೂ ನ್ಯಾಮತಿಯ 5 ಪ್ರಾಥಮಿಕ ಆರೋ ಗ್ಯಕೇಂದ್ರದ 15 ಉಪ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೊಗ ಪಡೆದುಕೊಳ್ಳಬೇಕೆಂದರು.

ಸಭೆಯನ್ನು ತಹಶೀಲ್ದಾರ್ ಬಸವನಗೌಡ ಕೋಟೂರು ಉದ್ಘಾಟಿಸಿದರು. ಪಂಚಾಯ್ತಿ ಮುಖ್ಯ ಅಧಿಕಾರಿ ಅಶೋಕ್, ಡಾ. ಗುರುರಾಜ್, ಮಧು, ಕಿರಿಯ ಮಹಿಳಾ ಸಹಾಯಕಿ ಶಿಲ್ಪ, ಮಂಜುಳ, ಕೋಡಿಹಳ್ಳಿ ಜಗದೀಶ್ ಉಪಸ್ಥಿತರಿದ್ದರು.

# ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕ್ರಮ

### ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಾಸಕ ಜಿ.ಕರುಣಾಕರ ರೆಡ್ಡಿ



ಹರಪನಹಳ್ಳಿ, ಏ.1 - ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಕೋವಿಡ್ ಕುರಿತು ಜಾಗೃತಿ ಮೂಡಿಸಿ, ಲಸಿಕೆ ಪ್ರಗತಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳ ಜೊತೆಗೆ ಮಾತನಾಡಿ, ಕ್ರಮ ಕೈಗೊಳ್ಳಲು ಹೇಳಿದರು. ಬೇಸಿಗೆ ಸಂದರ್ಭದಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಕೂಡಲೇ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಿ ಕೊಡಲು ಇಂದೇ ಸೂಚಿಸುತ್ತೇನೆ. ತಾಲ್ಲೂಕಿನ ಕೆರೆಗಳಿಗೆ ನದಿ ನೀರು ತುಂಬಿಸುವ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪ್ರಗತಿಯಲ್ಲಿದೆ. ಮುಂದಿನ ಆರು ತಿಂಗಳು ನಂತರ ಉದ್ಘಾಟನೆ ನೆರವೇರಿಸಲಾಗುವುದು ಎಂದರು.

ತಾಲ್ಲೂಕಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಾಗೂ 8ನೇ ವಾರ್ಡ್ ಅಂಬೇಡ್ಕರ್ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಹಾಕುವ ಕಾರ್ಯ ಭರದಿಂದ ಸಾಗಿದೆ. ಈಗಾಗಲೇ 3 ಸಾವಿರಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕಲಾಗಿದೆ. ಜನರು ಭಯ ಬಿಟ್ಟು ಲಸಿಕೆ ಹಾಕಿಸಿಕೊಳ್ಳಿರಿ ಹಾಗೂ ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ವೈದ್ಯರಾದ ಶಂಕರನಾಯ್ಕ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ತಾಲ್ಲೂಕು ಬಿಜೆಪಿ ಎಸ್.ಟಿ. ಘಟಕದ ಅಧ್ಯಕ್ಷ ಆರ್. ಲೋಕೇಶ್, ಪುರಸಭೆ ಸದಸ್ಯ ಎಂ.ಕೆ. ಜಾವೀದ್ ಮುಖಂಡರಾದ ಎಂ.ಪಿ. ನಾಯ್ಕ, ಯಡಿಹಳ್ಳಿ ಶೇಖರಪ್ಪ, ಆರ್. ಕರೇಗೌಡ, ರಾಘವೇಂದ್ರ ಶೆಟ್ಟಿ, ಬಾಗಳಿ ಕೊಟ್ರೇಶಪ್ಪ, ಆಲೂರು ಶ್ರೀನಿವಾಸ್, ಸಿದ್ದಪ್ಪ ರೆಡ್ಡಿ, ಎಂ. ಸಂತೋಷ್, ಯು.ಪಿ. ನಾಗರಾಜ ಇನ್ನಿತರರಿದ್ದರು.

# ಇಂದಿನ ಪೊಲೀಸ್ ಧ್ವಜ ದಿನಾಚರಣೆಗೊಂದು ವೃತ್ತಕ

**ರಾಷ್ಟ್ರ, ವ್ಯಕ್ತಿ ಮತ್ತು ಸಮಾಜದ ವಿಕಾಸ ಹಾಗೂ ಅಭಿವೃದ್ಧಿಗಳಿಗೆ ಯೋಜನಾಯುಕ್ತವಾದ ಇಲಾಖೆಗಳನ್ನು ತೆರೆಯಬೇಕಾಗುತ್ತದೆ. ಯೋಜನೆ, ಯೋಚನೆ ಮತ್ತು ಇಲಾಖೆ ಮಾನವನು ಹುಟ್ಟಿದಾಗಿನಿಂದಲೂ ನಡೆದುಬಂದ ಗುಣಗಳಾಗಿರಬಹುದು. ಆದರೆ ಅವು ಸುಸಜ್ಜಿತ ರೀತಿಯಲ್ಲಿ ನಡೆದು ಬಾರದೇ ಇದ್ದಾಗ ಅವುಗಳಿಗೆ ಹೊಸ ಸ್ವರೂಪವನ್ನು ಕೊಟ್ಟು ಸುಸಜ್ಜಿತತನಕ್ಕೆ ರೂಪಗೈಯ್ಯಬೇಕಾದರೆ ಕ್ರಮ ಪ್ರಾಪ್ತವಾಗಿರಬೇಕಾಗುತ್ತದೆ. ಹೀಗೆ ಕ್ರಮಯುಕ್ತವಾಗಿ, ಕಾಲೋಚಿತವಾಗಿ ನಡೆಯುವುದನ್ನು ಶಿಸ್ತಿನ ಇಲಾಖೆಯಿಂದ ಮಾತ್ರ ಸಾಧ್ಯವಾಗುವುದರಲ್ಲಿ ಸಂಶಯವಿಲ್ಲ.**

ಒಂದು ನಾಡು ನೆಮ್ಮದಿಯ ನಾಡು (Welfare state) ಆಗುವಂತೆ ಮತ್ತು ಆದರ್ಶ ದೇಶ (Idial State) ಆಗುವಂತೆ ಮಾಡಲು ಇಲಾಖಾ ಯೋಜನೆಗಳು ಪ್ರಮುಖವಾಗಿರುತ್ತವೆ. ರೀತಿ, ನೀತಿ ಹಾಗೂ ಆಡಳಿತಗಳಲ್ಲಿ ವಿಕಾಸವು ಆಗಲಿಕ್ಕೆ ಸಾಕಷ್ಟು ಅವಕಾಶವಿಲ್ಲದಿದ್ದಲ್ಲಿ ನಮ್ಮ ನಿಯಮಗಳು ಪದ್ಧತಿಗಳು ಹಾಗೂ ಕಾನೂನುಗಳು, ಧಾರ್ಮಿಕ ಕಟ್ಟಳೆಗಳು, ಶಾಸ್ತ್ರ ಗ್ರಂಥಗಳು ವಿಕಾಸದ ಬದಲು ಅಡ್ಡಿಯನ್ನುಂಟುಮಾಡುತ್ತಿದ್ದಲ್ಲಿ ನಮ್ಮ ಆಚಾರ, ವಿಚಾರ, ನಂಬಿಕೆಗಳು ಕೇವಲ ಶುಷ್ಕವಾಗದೇ ಆಡಂಬರ ಮತ್ತು ಹುರುಳಿಲ್ಲದವುಗಳಾದಲ್ಲಿ ವ್ಯಕ್ತಿ-ವ್ಯಕ್ತಿ, ಸಮಾಜ-ಸಮಾಜ, ಭಾಷೆ-ಭಾಷೆ ಮೊದಲಾದವುಗಳು ತಮ್ಮ ತಮ್ಮಲ್ಲಿ ಮೇಲ್ಮೆಗೆ ಬಡಿದಾಟವನ್ನು ಆರಂಭ ಮಾಡುವ ಕಾಲದಲ್ಲಿ ಮತ್ತು ಸರ್ವ ದೃಷ್ಟಿಯಿಂದ ಸರ್ವರಿಗೂ ಸಮಾನಾವಕಾಶ ದೊರೆಯದೇ ಕೆಲವರ ಹಿತಾಸಕ್ತಿಗಳೇ ಮೇಲುಗೈಯ್ಯಾಗಿ ಸಮಾಜದಲ್ಲಿ ಅಸಂತೋಷ, ಅನೈತಿಕತೆ ತಲೆದೋರಿ ಕೆಲವರನ್ನು ಇನ್ನೂ ಕೆಲವರು ಸುಲಿಗೆ ಮಾಡುವುದು ಕಂಡು ಬಂದಲ್ಲಿ ತಮ್ಮ ಜೀವನದ ಮೌಲ್ಯಗಳ ಅರಿವು ಕನಿಷ್ಟವಾಗಿ ಮೌಲ್ಯಗಳಲ್ಲದವುಗಳನ್ನು ಮೌಲ್ಯವೆಂದು ಭ್ರಮಿಸಿ, ತಪ್ಪು ತಿಳುವಳಿಕೆಗಳ ಬೆನ್ನು ಹತ್ತಿ ದಾರಿಗಾಣದಾದಲ್ಲಿ, ನಮ್ಮ ನೀತಿ ಹಾಗೂ ಧರ್ಮಗಳಿಗೆ ಬಲವಾದ ಪೆಟ್ಟು ಬೀಳುವಂತಹ ಕಾಲಕ್ಕೆ ಆರಕ್ಷಕ ಇಲಾಖೆ ಕೈಗೊಳ್ಳುವ ಜಾಗೃತ ಪ್ರಜ್ಞೆ ಬಹು ಪ್ರಗಲ್ಭವಾದದ್ದು.

ಕ್ರಿ.ಶ. ಪ್ರಾರಂಭದಲ್ಲಿ ಜೋಳವಾಳಿ, ಲೆಂಕವಾಳಿ, ಗರುಡವಾಳಿ, ವೇಳವಾಳಿ, ವಾಕಿಯಾ ನವೀಸ್ (Vaquia Navis), ಸ್ವಾನಿಹ ನವೀಸ್ (Swaniha Navis), ಖುಫಿಯಾ ನವೀಸ್ (Khufia Navis) ತಂಡಗಳು ಪೊಲೀಸ್ ಕಾರ್ಯಚಾರಣರಾಗಿದ್ದರು. ಮೈಸೂರನ್ನು ಆಳುತ್ತಿದ್ದ ಅರಸರ ಕಾಲದಲ್ಲಿ ತಳವಾರರು, ತೋಟಿಗಳು, ಕಾವಲುಗಾರರು, ನೀರಗಂಟಿಗಳು, ಕಟ್ಟಬಿಡಿಗಳು, ಪೇದೆಗಳು, ಉಂಬಳಿದಾರರು, ಅಮರಗಾರರು, ಹಳೇಪೈಕರು, ಹುಲ್ಲುಗಾವಲರು, ಅಂಕಮಾಲಿಗಳು, ಪಟೇಲರು, ಶಾನಭೋಗರು, ಮುಂತಾದ ನಾಮಧೇಯಗಳಿಂದ ಕರೆಯಲ್ಪಡುತ್ತಿದ್ದ ಗ್ರಾಮ ಸೇವಕರು ಪೊಲೀಸರ ಕರ್ತವ್ಯಗಳನ್ನು ನಿಭಾಯಿಸುತ್ತಿದ್ದರೆಂದು ಮತ್ತು ಅಲ್ಪಸ್ವಲ್ಪ ವ್ಯತ್ಯಾಸಗೊಂಡು ಹೈದರಾಲಿ, ಟಿಪ್ಪುಸುಲ್ತಾನ್ ಪೂರ್ಣಯ್ಯನವರ ಕಾಲದಲ್ಲಿಯೂ ಮುಂದುವರೆದವು ಹಾಗೂ ಈ ಸೇವಕರು ಇನಾಂ ಭೂಮಿಯ ರೂಪದಲ್ಲಿ ರೈತರು ಕೊಡುವ ಧಾನ್ಯದ ಪಾಲಿನ ರೂಪದಲ್ಲಿ ಅಥವಾ ರಾಜ್ಯದಿಂದ ನೇರವಾಗಿ ಸಂಭಾವನೆ ಪಡೆಯುತ್ತಿದ್ದರು ಎಂದು 1838 ರಲ್ಲಿ ಸರ್ ಮಾರ್ಕ್ ಕಬ್ಬನ್ ತನ್ನ ವರದಿಯಲ್ಲಿ ಬರೆದಿದ್ದಾನೆ.

ಗ್ರಾಮಗಳಲ್ಲಿ ಜೀವನ ಪದ್ಧತಿಯು ಬದಲಾವಣೆಯನ್ನು ಹೊಂದುತ್ತಾ ಮುನ್ನಡೆದಾಗ ಗ್ರಾಮದ ಪೊಲೀಸರನ್ನು ಕಡೆಗಣಿಸಿದ್ದರಿಂದ ಅವರ ಸ್ಥಾನದಲ್ಲಿ ಕಂದಾಚಾರಿ ಪೇದೆಗಳು ಪೂರ್ಣಯ್ಯನವರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು. ಇವರು ಒಂದು ರೀತಿಯ ಅನಿಯತ ಪದಾತಿ ಸೈನ್ಯವಾಗಿದ್ದರು. ಆದರೂ ಸಹ ಅಪರಾಧಿಗಳನ್ನು ಪತ್ತೆ ಮಾಡಿ ದಸ್ತಗಿರಿ ಮಾಡುವುದು, ಕಾರಾಗೃಹದಲ್ಲಿ ಅವರನ್ನು ಕೂಡಿಡುವುದು, ಕೋಟೆ-ಕೊತ್ತಲ ಕಾವಲು ನಡೆಸುವುದು ಹಾಗೂ ಇತರೆ ಕೆಲವು ನಿಯಮಿತ ಕೆಲಸಗಳು ಅವರ ಪ್ರಧಾನ ಕರ್ತವ್ಯಗಳಾಗಿದ್ದವು.

ಕಂದಾಚಾರಿ ಪೇದೆಗಳನ್ನು ಭೂ ಕಂದಾಯ ಸಂಗ್ರಹಣೆಗಾಗಿ 1934 ರಲ್ಲಿ ನೇಮಿಸಿಕೊಂಡರೂ ಪ್ರತ್ಯೇಕವಾಗಿ ಪೊಲೀಸ್ ಪೇದೆಗಳನ್ನಾಗಿ ಮಾಡಲಾಯಿತು. ಕಾಲಾಳು, ಕುದುರೆ ಸವಾರರ ದಳಗಳನ್ನು ಸ್ಥಾಪಿಸುವಲ್ಲಿ ಕಂದಾಚಾರ ಸಿಬ್ಬಂದಿಯನ್ನು ಸಹಾಯಕವಾಗಿ ನೇಮಿಸಲಾಯಿತು. ಈ ಸುಧಾರಣೆಯು ಮೊದಲ ಹೆಜ್ಜೆಯಾಗಿ ಬೆಂಗಳೂರು ಜಿಲ್ಲೆಯಲ್ಲಿ 1861 ರಲ್ಲಿ ಪೊಲೀಸ್ ಅಧಿನಿಯಮವನ್ನು 1886 ರಲ್ಲಿ ಜಾರಿಗೆ ತರುವುದರ ಮೂಲಕ ಪ್ರಭಾರ ವಹಿಸಲು ಮದ್ರಾಸ್ ಪೊಲೀಸ್ ಅಧಿಕಾರಿಯೊಬ್ಬರನ್ನು ನೇಮಿಸಲಾಯಿತು. ನ್ಯಾಯಿಕ ಆಯುಕ್ತ (Judicial Commissioner) ರಾದ ಮ್ಯಾಂಗ್ಲೇಸ್‌ರವರು ಸಿದ್ಧಪಡಿಸಿದ ಯೋಜನೆಯಂತೆ ಗ್ರಾಮ ಪೊಲೀಸ್ ಪಡೆಯನ್ನು ನವೀಕರಿಸಿ ಪುನರ್‌ರಚಿಸುವ ಕಾರ್ಯವನ್ನು ಆರಂಭಿಸಿದರು.

1886 ರಲ್ಲಿ ನ್ಯಾಯಿಕ ಆಯುಕ್ತರು ಪದನಿಮಿತ್ತ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದರು. 1873 ರಲ್ಲಿ ಇವರಿಗೆ ಸಹಾಯಕರಾಗಿ ಉಪಪೊಲೀಸ್ ಇನ್ಸ್‌ಪೆಕ್ಟರ್‌ರವರನ್ನು ನೇಮಕ ಮಾಡಲಾಯಿತು. 1875 ರಲ್ಲಿ ಈ ಹುದ್ದೆಗೆ



ಸಂಬಂಧಿಸಿದಂತೆ ಕೆಲವು ಆದೇಶಗಳನ್ನು ಹೊರಡಿಸಲಾಯಿತು. 1876-78 ರಲ್ಲಿ ಬರಗಾಲದ ನಿಮಿತ್ತ ಉಪಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯನ್ನು ಸರ್ಕಾರಿ ನೌಕರರನ್ನು ವಜಾ ಮಾಡಲಾಯಿತು. 1879 ರಲ್ಲಿ ಮುಖ್ಯ ಆಯುಕ್ತರು, ಪೊಲೀಸ್ ಇಲಾಖೆಯ ನೇರ ನಿಯಮವನ್ನು ವಹಿಸಿಕೊಂಡರು. 1881 ರ ಜನವರಿಯಲ್ಲಿ ಪೊಲೀಸ್ ಇಲಾಖೆಯು ಪುನರ್ ಸಂಘಟನೆಯಾಗಿ ಮುಖ್ಯ ಆಯುಕ್ತರು, ಚಲಾಯಿಸುವಂತಹ ಅಧಿಕಾರದ ವ್ಯಾಪ್ತಿ ಹಾಗೂ ಕ್ಷೇತ್ರಗಳ ಸಂಬಂಧದಲ್ಲಿ ಸೂಚನೆಗಳನ್ನು ಕೊಟ್ಟು ಮುಂದುವರೆಸಲಾಯಿತು. ರಾಜಮನೆತನಕ್ಕೆ ರಾಜ್ಯ 1881 ರಲ್ಲಿ ಪ್ರದಾನವಾದಾಗ ಪೊಲೀಸ್ ಕಾರ್ಯದರ್ಶಿಯೊಬ್ಬರ ನೇಮಕವಾಯಿತು. 1885 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರನ್ನು ನೇಮಿಸಲಾಯಿತು. ಇದೇ ಸಂದರ್ಭದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ಹುದ್ದೆಯನ್ನು ಹಾಗೂ ಪೊಲೀಸ್ ಸಹಾಯಕ ಕಮೀಷನರ್ ಹುದ್ದೆಗಳನ್ನು ಸೃಜಿಸಲಾಯಿತು. ಗ್ರಾಮ ಪೊಲೀಸ್ ಮತ್ತು ನಿಯತ ಪೊಲೀಸ್ ದಳಗಳು ತಮ್ಮ ತಮ್ಮ ಕಾರ್ಯಗಳನ್ನು ನಿಭಾಯಿಸುತ್ತಿದ್ದರು. 1901-02 ರಲ್ಲಿ ಪೊಲೀಸರಿಗೆ ಸೂಕ್ತ ಸಮವಸ್ತ್ರ ಹಾಗೂ ಈಟಿಗಳನ್ನು ಪ್ರಥಮ ಬಾರಿಗೆ ಒದಗಿಸಲಾಯಿತು.

ಆಡಳಿತ ಉದ್ದೇಶಕ್ಕಾಗಿ ಪೊಲೀಸ್ ದಳಗಳಲ್ಲಿ ಪ್ರಧಾನ ಭಾಗಗಳನ್ನು ಮಾಡಲಾಯಿತು. 1) ಜಿಲ್ಲಾ ಪೊಲೀಸ್ (2) ಕೋಲಾರ ಚಿನ್ನದ ಗಣಿ ನಗರ ಪೊಲೀಸ್ ದಳ (3) ರೈಲ್ವೆ ಪೊಲೀಸ್ (4) ಅಪರಾಧ ತನಿಖಾ ಇಲಾಖೆ (5) ಪ್ರಾಂತೀಯ ಮೀಸಲು ಪೊಲೀಸ್ (6) ತರೀಕೆರೆ-ನರಸಿಂಹರಾಜಪುರ ಟ್ರಾಂವೇ ಪೊಲೀಸ್ (7) ಬೆರಳೊತ್ತು ವಿಭಾಗ (8) ಕೇಂದ್ರ ಕಛೇರಿ ತರಬೇತಿ ಶಾಲೆ ಹಾಗೂ ಎಲ್ಲಾ ಜಿಲ್ಲೆಗಳಲ್ಲೂ ಪ್ರತ್ಯೇಕವಾಗಿ ಅಭಿಯೋಗ (Prosecuting Inspector) ಅಭಿಯೋಗ ನಡೆಸುವ ಇನ್ಸ್‌ಪೆಕ್ಟರ್‌ಗಳನ್ನು, ಪೊಲೀಸ್ ಅಧಿಕಾರಿಗಳನ್ನು ನೇಮಿಸಲಾಯಿತು. ಹೊರದೇಶದ ಮತ್ತು ಸ್ಥಳೀಯ ಪುಂಡರ ಕಾಟಗಳನ್ನು ವೀಕ್ಷಿಸಲು ಪೊಲೀಸ್ ಬಾಹ್ಯ ಉಕ್ಕಡ (Out Post) ಗಳನ್ನು ಸ್ಥಾಪಿಸಲಾಯಿತು. ಶಿವಮೊಗ್ಗ, ಹಾಸನ, ಬೆಂಗಳೂರು ಮತ್ತು ಚಿಕ್ಕಮಗಳೂರಿನಲ್ಲಿ ಪೊಲೀಸ್ ಶಾಲೆಗಳಿದ್ದು ದಂಡವಿಧಿ ಮತ್ತು ಕಾರ್ಯವಿಧಾನಗಳನ್ನು ಕಲಿಸಿಕೊಡುವುದರ ಮೂಲಕ ಅವರಿಗೆ ಕವಾಯಿತು ಮತ್ತು ಬಂದೂಕು ಬಳಸುವ ಶಿಕ್ಷಣ ನೀಡಲಾಗುತ್ತಿತ್ತು. 1892 ರಲ್ಲಿ ಬೆಂಗಳೂರಿನ ಶಾಲೆಯನ್ನು ಮತ್ತಷ್ಟು ಉತ್ತಮ ಸ್ಥಿತಿಯಲ್ಲಿಟ್ಟು, ಕೇಂದ್ರ ಶಾಲೆಯನ್ನಾಗಿ ಅಭಿವೃದ್ಧಿಪಡಿಸಲಾಯಿತು ಹಾಗೂ ಈ ಶಾಲೆಗೆ ದಂಡನ್ಯಾಯ ಶಾಸ್ತ್ರಕ್ಕೆ ಸಂಬಂಧಿಸಿದ ಒಂದು ವಸ್ತು ಸಂಗ್ರಹಾಲಯವನ್ನು ಸೇರಿಸಲಾಯಿತು.

ಮದ್ರಾಸ್-ಕರ್ನಾಟಕ ಪ್ರದೇಶ, ಕೊಡಗು ಪ್ರದೇಶ, ಮುಂಬೈ-ಕರ್ನಾಟಕ ಪ್ರದೇಶ, ಹೈದ್ರಾಬಾದ್-ಕರ್ನಾಟಕ ಪ್ರದೇಶಗಳಲ್ಲಿ ಆಯಾಯ ಪ್ರದೇಶಕ್ಕೆ ಸರಿಯಾಗಿ ಪೊಲೀಸ್ ಅಧಿನಿಯಮಗಳನ್ನು ಜಾರಿಗೆ ತರಲಾಯಿತು. ಏಕೀಕರಣದ ನಂತರ ಹೊಸ ಮೈಸೂರು ರಾಜ್ಯ ನಿರ್ಮಾಣವಾದಾಗ 1964 ರ ಜನವರಿ 18 ರಂದು ರಾಷ್ಟ್ರಪತಿಯವರಿಂದ ಪೊಲೀಸ್ ಆಡಳಿತ ಏಕರೂಪತೆಯ ಅಧಿನಿಯಮಕ್ಕೆ ಅನುಮೋದನೆ ದೊರೆತು 1865ನೇ ಏಪ್ರಿಲ್ 2ನೇ ದಿನಾಂಕದಂದು ಜಾರಿಗೆ ತರಲಾಯಿತು. ಈ ದಿನಾಂಕವನ್ನೇ ಪೊಲೀಸ್ ಧ್ವಜ ದಿನಾಚರಣೆ ಎಂದು ಘೋಷಿಸಲಾಯಿತು. ಈ ದಿನ ಪೊಲೀಸ್ ಧ್ವಜಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ ಸಂಗ್ರಹವಾದ ಹಣದಿಂದ ನಿವೃತ್ತ ಪೊಲೀಸ್ ಅಧಿಕಾರಿಗಳ ಮತ್ತು ಕುಟುಂಬದವರ ಕ್ಷೇಮಾಭಿವೃದ್ಧಿ ಹಾಗೂ ಪುನರ್‌ವಸತಿಗಾಗಿ ವಿನಿಯೋಗಿಸುವ ಕಾರ್ಯವನ್ನು ಕೈಗೊಳ್ಳಲಾಯಿತು.

ನಗರ ಸಶಸ್ತ್ರ ಮೀಸಲು ಪೊಲೀಸ್, ನಗರ ಸಂಚಾರಿ ವಿಭಾಗ, ರೈಲ್ವೆ ಪೊಲೀಸ್ 1960 ರಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ಮಹಿಳಾ ಪೊಲೀಸ್, ಪೊಲೀಸ್ ನಿಸ್ತಂತು (ವೈರ್‌ಲೆಸ್), ಆಯುಧಗಳು, ಶ್ವಾನದಳ, ಬೆರಳಚ್ಚು ವಿಭಾಗ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ನಾಗರಿಕ ಕೋವಿ ತರಬೇತಿ ಕೇಂದ್ರ, ವಿಧಿವಿಜ್ಞಾನ ಪ್ರಯೋಗಾಲಯ, ಅಪರಾಧ ಮತ್ತು ವಿಶೇಷ ಶಾಖೆ, ವೈಜ್ಞಾನಿಕ ಸಹಾಯ ಘಟಕಗಳು, ಅಶ್ವಾರೋಹಿಗಳು, ಪೊಲೀಸ್ ಸಂಶೋಧನಾ ಕೇಂದ್ರ, ಪೊಲೀಸ್ ಸಾರಿಗೆ, ಪೊಲೀಸ್ ವಾದ್ಯವೃಂದ, ಆಧುನೀಕರಣ ನಾಗರಿಕ ಹಕ್ಕು ಜಾರಿ ವಿಭಾಗ, ಔದ್ಯಮಿಕ ಭದ್ರತಾ ಪಡೆ, ಗುಪ್ತಚರ ದಳ, ಎಲ್ಲಾ ವಿಭಾಗಗಳ ಪೊಲೀಸ್ ತರಬೇತಿ ಶಾಲೆಗಳು, ಗೃಹರಕ್ಷಕ ದಳ, ಅಗ್ನಿ ಶಾಮಕದಳ ಇತ್ಯಾದಿಗಳನ್ನೊಳಗೊಂಡು ಆರಕ್ಷಕ ಕೇಂದ್ರ ತನ್ನ ಕೈಂಕರ್ಯವನ್ನು ಕಿಂಕರತ್ವದಿಂದ ನಡೆದು ಬಂದಿರುವುದು ನಿಜಕ್ಕೂ ಅದ್ಭುದಾದ್ಭುತ.

ಗಮನಾರ್ಹ ವಿಷಯವೇನೆಂದರೆ, ಹಿರಿಯ ಸೇವಾ ದಕ್ಷರಿಗೂ, ಹೊಸದಾಗಿ ಸೇರಿಕೊಳ್ಳುವ ಕಿರಿಯ ಸೇವಾದಕ್ಷರಿಗೂ ವೇತನದಲ್ಲಿ ಕಂಡು ಬಂದ ಅತಿಯಾದ ವ್ಯತ್ಯಾಸ. ಸುಮಾರು ವರ್ಷಗಳ ಸೇವೆ ಸಲ್ಲಿಸಿದ ಹಿರಿಯ ಪೇದೆ, ಕಿರಿಯ ಪೇದೆಗಿಂತ ಕನಿಷ್ಟ ಮಟ್ಟದ ವೇತನ ಪಡೆಯುವುದು. ಇದರಿಂದ ಮಾನಸಿಕವಾಗಿ ಸ್ಥೈರ್ಯವನ್ನು ಕಳೆದುಕೊಂಡು ಸೇವೆಯಲ್ಲಿ ದಕ್ಕೆಯುಂಟಾಗದೇ ಖಿನ್ನತೆ ಬೆಳೆಯುತ್ತದೆ. ಬದುಕಿನ ಪಾಥೇಯಕ್ಕೆ ಆರ್ಥಿಕತೆಯೇ ಮೂಲಾಧಾರ ದಿನನಿತ್ಯದ ವ್ಯಚ್ಚಗಳನ್ನು ನಿಭಾಯಿಸಲು ಹಣವೇ ಪ್ರಮುಖ. ಆದ ಕಾರಣ ಸರ್ಕಾರ ಆದಷ್ಟು ಈ ವ್ಯತ್ಯಾಸವನ್ನು ಸರಿಪಡಿಸಿ ಪೊಲೀಸರು ಸುಶಾಂತತೆಯಿಂದ, ಸುಮಧುರತೆಯಿಂದ ಬಾಳಲು ಅನುವು ಮಾಡಿಕೊಟ್ಟರೆ ನಿಜಕ್ಕೂ ಆರೋಗ್ಯಕರ; ಇಂದಿನ ಈ ಪೊಲೀಸ್ ಧ್ವಜ ದಿನಾಚರಣೆಗೆ ಔನ್ನತ್ಯ ದೊರೆತಂತಾಗುತ್ತದೆ.

**ಪ್ರೊ|| ಬಾತಿ ಬಸವರಾಜ್**, ದಾವಣಗೆರೆ.
**ಮೊಬೈಲ್ : 88845 27130**

# ಇಂದು ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ವಾಣಿಜ್ಯ ಸಂಕೀರ್ಣ ಉದ್ಘಾಟನೆ



ದಾವಣಗೆರೆ ನಗರದ ಹದಡಿ ರಸ್ತೆಯ ಕುರುಬರ ಹಾಸ್ಟೆಲ್‌ನಲ್ಲಿ ನೂತನವಾಗಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದ ಉದ್ಘಾಟನಾ ಸಮಾರಂಭ ಇಂದು ನಡೆಯಲಿದೆ. ಸಮಾರಂಭಕ್ಕೆ ಮಾಜಿ ಮುಖ್ಯಮಂತ್ರಿ, ವಿಧಾನಸಭಾ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗಮಿಸಲಿದ್ದಾರೆ. ಅಂದು ಮಧ್ಯಾಹ್ನ 12.30ಕ್ಕೆ ಕುರುಬರ ಹಾಸ್ಟೆಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಾಣಿಜ್ಯ ಸಂಕೀರ್ಣ ಉದ್ಘಾಟಿಸುವ ಮಾಜಿ ಸಿಎಂ ಸಿದ್ದರಾಮಯ್ಯನವರು ಬಳಿಕ ತ್ರಿಶೂಲ್ ಕಲ್ಯಾಣ ಮಂಟಪದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಮತ್ತು ತಿಂಥಿಣಿ ಶ್ರೀಗಳ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ವೈ. ವಿರೂಪಾಕ್ಷಪ್ಪ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಮಾಜಿ ಸಚಿವರುಗಳಾದ ಹೆಚ್.ಎಂ. ರೇವಣ್ಣ, ಎಸ್.ಎ. ರವೀಂದ್ರನಾಥ್, ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಎಸ್. ರಾಮಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್ ಸಾಬ್, ಶಾಸಕ ಭೈರತಿ ಸುರೇಶ್ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಕೆಂಗೋ ಹನುಮಂತಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಇತ್ತೀಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಮ್ಮ ಸಮಾಜದಿಂದ ಆಯ್ಕೆಯಾಗಿರುವ 256 ಜನ ಗ್ರಾಮ ಪಂಚಾಯಿತಿ ಸದಸ್ಯರಿಗೆ ಸನ್ಮಾನಿಸಿ, ಗೌರವಿಸಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕುರುಬರ ಸಂಘದ ಬಳ್ಳಾರಿ ಷಣ್ಮುಖಪ್ಪ, ಬಿ.ದಿಳ್ಯಪ್ಪ, ಬಿ.ಎಚ್.ಪರಶುರಾಮಪ್ಪ, ಸಂಗಪ್ಪ, ಬಳ್ಳಾರಿ ಜಯಣ್ಣ, ಎಚ್.ಬಿ.ಗೋಣೆಪ್ಪ, ಮಂಜುನಾಥ್ ಇಟ್ಟಿಗುಡಿ, ಪ್ರಕಾಶ್ ಮತ್ತಿತರರು ಹಾಜರಿದ್ದರು.

## ಶಿವಕುಮಾರ ಶ್ರೀಗಳ ಜನ್ಮ ದಿನಾಚರಣೆ : ಪ್ರಸಾದ ವಿನಿಯೋಗ



ದಾವಣಗೆರೆ, ಏ.1- ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಲ್ಲಿ ಇಂದು ಸಂಜೆ ತ್ರಿವಿಧ ದಾಸೋಹಿ ನಡೆದಾಡುವ ದೇವರು ಪದ್ಮಭೂಷಣ ಡಾ. ಶಿವಕುಮಾರ ಸ್ವಾಮಿಗಳ ಜನ್ಮ ದಿನಾಚರಣೆ ಪ್ರಯುಕ್ತ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕ ಹಾಗೂ ಜಿಲ್ಲಾ ಮಹಿಳಾ ಘಟಕಗಳ ಸಹಯೋಗದಲ್ಲಿ ಶ್ರೀಗಳನ್ನು ಸ್ಮರಿಸಲಾಯಿತು. ಸ್ಮರಣಾರ್ಥವಾಗಿ ಪ್ರಸಾದ ವಿನಿಯೋಗ ಮಾಡಲಾಯಿತು.

ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಟಿಂಕರ್ ಮಂಜಣ್ಣ , ಎಂ.ವಿ. ಜಯಪ್ರಕಾಶ್ ಮಾಗಿ, ಟಿ.ಎಸ್. ಮಲ್ಲಿಕಾರ್ಜುನ್, ನಾಗರಾಜ್ ಅಂಗಡಿ, ಶಿವನಾಂದ್, ಗುರು, ಮಹಿಳಾ ನಗರ ಘಟಕದ ಅಧ್ಯಕ್ಷೆ ಪುಷ್ಪ ವಾಲಿ, ಪ್ರಧಾನ ಕಾರ್ಯದರ್ಶಿ ಮಂಗಳ ಕರಿಬಸವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದ್ರಾಕ್ಷಾಯಣಮ್ಮ, ಶೋಭ ಕೊಟ್ರೇಶ್, ಸುಮ ಮಲ್ಲಿಕಾರ್ಜುನ್, ನಾಗಮಣಿ ಹಂಪಾಳಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಜನ ಸೇರುವ ಸ್ಥಳಗಳಲ್ಲಿ ಮಾರ್ಷಲ್ ನೇಮಕ

## ಕೋವಿಡ್ ನಿಯಮ ಪಾಲಿಸದಿದ್ದರೆ ಕಠಿಣ ಕ್ರಮ: ವ್ಯಾಪಾರಸ್ಥರಿಗೆ ಡಿಸಿ ಎಚ್ಚರಿಕೆ

ದಾವಣಗೆರೆ, ಏ.1- ದೊಡ್ಡ ದೊಡ್ಡ ಅಂಗಡಿಗಳು, ವ್ಯಾಪಾರ ವಹಿವಾಟು ಕೇಂದ್ರಗಳು, ಮದುವೆ ಮಂಟಪಗಳು, ಎಪಿಎಂಸಿ ಮಾರುಕಟ್ಟೆ, ಥಿಯೇಟರ್, ವಸತಿ ಶಾಲೆಗಳು ಸೇರಿದಂತೆ ಹೆಚ್ಚು ಜನ ಸೇರುವ ಸ್ಥಳಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಎಚ್ಚರಿಕೆ ನೀಡಿದರು.

ಗುರುವಾರ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ವ್ಯಾಪಾರ - ವಹಿವಾಟು, ಕಲ್ಯಾಣ ಮಂಟಪ, ಶೈಕ್ಷಣಿಕ ಸಂಸ್ಥೆ ಸೇರಿದಂತೆ ಆರ್ಥಿಕ ಚಟುವಟಿಕೆ ನಡೆಸುವ ಮಾಲೀಕರುಗಳಿಗೆ ಕೋವಿಡ್ ಮಾರ್ಗಸೂಚಿಗಳ ಕಟ್ಟುನಿಟ್ಟಿನ ಅನುಸರಣೆ ಕುರಿತು ತಿಳಿಸಲು ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನ ಸೇರುವ ಅಂಗಡಿಗಳು, ಕೇಂದ್ರಗಳನ್ನೇ 'ಸೂಪರ್ ಸ್ಪೆಡರ್' ಎಂದು ಕರೆಯಲಾಗುತ್ತದೆ. ಇಲ್ಲಿ ಜನ ನಿಯಂತ್ರಣ ಅಗತ್ಯ. ಜನ ಸೇರುವ ಸ್ಥಳಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲು ಮಾರ್ಷಲ್ ನೇಮಕ ಮಾಡಲಾಗುವುದು. ವಹಿವಾಟು ಕೇಂದ್ರಗಳ ಮಾಲೀಕರು ಸರ್ಕಾರದ ಮಾರ್ಗ ಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಕೋವಿಡ್ ನಿಯಂತ್ರಣಕ್ಕೆ ಸಹಕರಿಸಬೇಕು ಎಂದರು.

ಕಳೆದ ಸಾಲಿನ ಮಾರ್ಚ್ ಮಾಹೆಯಲ್ಲಿ ಕೇವಲ 2 ಪ್ರಕರಣಗಳಿದ್ದು, ಮಾರ್ಚ್ 23 ಕ್ಕೆ ಲಾಕ್‌ಡೌನ್ ತಯಾರಿಯಾಗಿತ್ತು. ಜೊತೆಗೆ ಜನರು ಅತ್ಯಂತ ಎಚ್ಚರಿಕೆಯಿಂದ ಇದ್ದರು.



**ಕಲ್ಯಾಣ ಮಂಟಪದಲ್ಲಿ 200 ಕ್ಕಿಂತ ಹೆಚ್ಚು ಜನ ಸೇರಿದರೆ ಮಂಟಪದ ಮಾಲೀಕರು, ಹೆಣ್ಣು ಮತ್ತು ಗಂಡಿನ ಕಡೆಯವರಿಂದ ಪಾಲಿಕೆ ಅಧಿಕಾರಿಗಳು ದಂಡ ವಸೂಲಿ ಮಾಡಲಿದ್ದಾರೆ. ಸೂಪರ್ ಸ್ಪ್ರೆಡರ್‌ಗಳಾದ ಕಲ್ಯಾಣ ಮಂಟಪ, ವಸತಿ ಶಾಲೆ, ಅಂಗಡಿಗಳಲ್ಲಿ, ಥಿಯೇಟರ್ ಇತರೆಡೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.**

ಆದರೆ ಪ್ರಸ್ತುತ 156 ಪ್ರಕರಣಗಳಿದ್ದರೂ ಜನರು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಉಡಾಫೆಯಿಂದ ಎಲ್ಲಿ ಬೇಕೆಂದರಲ್ಲಿ ಓಡಾಡುತ್ತಿದ್ದು, ಮಾಸ್ಕ್ ಧರಿಸುತ್ತಿಲ್ಲ, ಅಂತರ ಕಾಪಾಡುತ್ತಿಲ್ಲ ಎಂದರು.

ಪ್ರಸ್ತುತ ಪರಿಸ್ಥಿತಿ ಗಂಭೀರವಾಗಿದೆ. ಕೋವಿಡ್ ವೈರಾಣು ರೂಪಾಂತರಗೊಂಡಿದ್ದು ಎರಡನೇ ಅಲೆಯಲ್ಲಿ ವೈರಾಣು ಅತ್ಯಂತ ವೇಗವಾಗಿ ಹರಡುತ್ತಿದೆ. ಯಾರೂ ಕೋವಿಡನ್ನು ಹಗುರವಾಗಿ ತೆಗೆದುಕೊಳ್ಳಬಾರದು. ವ್ಯಾಪಾರ, ವಹಿವಾಟು, ಮದುವೆ ಮನೆ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮಾಸ್ಕ್ ಇಲ್ಲದೇ ಓಡಾಡುತ್ತಿದ್ದಾರೆ. ಸಾವುಗಳು ನಡೆಯುತ್ತಿದ್ದರೂ ಜನತೆ ಮೈಮರೆತಿರುವುದು ಸಲ್ಲದು ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್ ಮಾತನಾಡಿ, ಕಳೆದ ಸಾಲಿನ ಮಾರ್ಚ್ 4 ರಿಂದ ಕೋವಿಡ್ ನಿಯಂತ್ರಣ ಚಟುವಟಿಕೆಯನ್ನು ಸರ್ಕಾರ ಅತ್ಯಂತ ಕಟ್ಟುನಿಟ್ಟಾಗಿ ಆರಂಭಿಸಿದ್ದು, ಇಲ್ಲಿಯವರೆಗೆ ಮುಂದುವರೆದಿದೆ. ಇದುವರೆಗೆ 27605 ಪಾಸಿಟಿವ್ ಪ್ರಕರಣ ಬಂದಿದ್ದು, ಒಟ್ಟು 264 ಸಾವು ಸಂಭವಿಸಿವೆ. ಕಳೆದ ಆಗಸ್ಟ್‌ನಲ್ಲಿ ಅತಿ ಹೆಚ್ಚು ಪಾಸಿಟಿವಿಟಿ ದರ ಅಂದರೆ ಶೇ.16.30 ಇತ್ತು. ಸೋಂಕು ಹರಡುವ ಕೊಂಡಿ ತುಂಡು ಮಾಡುವ ಕಾರ್ಯವನ್ನು ಮಾಡುತ್ತಾ ಬಂದಿದ್ದು, ಈ ಮಾರ್ಚ್‌ನಲ್ಲಿ ಪಾಸಿಟಿವಿಟಿ ದರ 0.29 ಇದೆ. ಪ್ರಸ್ತುತ 160 ಪಾಸಿಟಿವ್ ಪ್ರಕರಣ ಇದ್ದು ಇದರಲ್ಲಿ ದಾವಣಗೆರೆ ತಾಲ್ಲೂಕಿನದ್ದೇ 124 ಪ್ರಕರಣಗಳು ಇವೆ ಹಾಗೂ ನಗರದ್ದೇ 106 ಪ್ರಕರಣಗಳು ಇದ್ದು ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

ಎಲ್ಲ ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳು ಐಎಲ್‌ಐ ಮತ್ತು ಎಸ್‌ಎಆರ್‌ಐ ಪ್ರಕರಣಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಕಳುಹಿಸಬೇಕು ಹಾಗೂ ಎಲ್ಲ ಹೋಟೆಲ್, ಛತ್ರ, ವಸತಿ ಶಾಲೆ ಸೇರಿದಂತೆ ಹೆಚ್ಚು ಜನರು ಕೆಲಸ ಮಾಡುವ ಅಂಗಡಿಗಳು, ಹೋಟೆಲ್, ಶಾಲೆಗಳಲ್ಲಿ 15 ದಿನಗಳಿಗೊಮ್ಮೆ ಕೋವಿಡ್ ಪರೀಕ್ಷೆ ಮಾಡಿಸಬೇಕೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ವೈಯಕ್ತಿಕವಾಗಿ ಕೋವಿಡ್ ವಿರುದ್ದ ಹೋರಾಡಬೇಕಿರುವ ಇಂದಿನ ಸ್ಥಿತಿಯಲ್ಲಿ ವ್ಯಾಪಾರ ವಹಿವಾಟು ಇತರೆ ಸಂಸ್ಥೆಗಳು ಸಹಕರಿಸಬೇಕು ಎಂದರು.

ಮೊನ್ನೆವರೆಗೆ ಸಿಂಗಲ್ ಡಿಜಿಟ್‌ನಲ್ಲಿದ್ದ ಪ್ರಕರಣ ಇಂದು ಡಬಲ್ ಡಿಜಿಟ್ ಆಗಿದ್ದು ಮೂರಂಕಿಗೆ ತಲುಪುವ ಸಮಯ ದೂರವಿಲ್ಲ. ಆದ ಕಾರಣ ಎಲ್ಲರೂ ಎಚ್ಚೆತ್ತುಕೊಂಡು ಕೋವಿಡ್ ನಿಯಮ ಪಾಲಿಸಬೇಕು ಎಂದರು.

ಜಿ.ಪಂ ಸಿಇಓ ಡಾ.ವಿಜಯ ಮಹಾಂತೇಶ ದಾನಮ್ಮನವರ್ ಮಾತನಾಡಿ, ಮನೆಗಳಲ್ಲೂ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದರು.

ಸಭೆಯಲ್ಲಿ ಎಡಿಸಿ ಪೂಜಾರ ವೀರಮಲ್ಲಪ್ಪ, ಎಸಿ ಮಮತಾ ಹೊಸಗೌಡರ್ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ವರ್ತಕರ ಸಂಘದ, ಐಎಂಎ, ಛೇಂಬರ್ ಆಫ್ ಕಾಮರ್ಸ್, ಸಿನೆಮಾ ಥಿಯೇಟರ್, ವಸತಿ ಶಾಲೆಗಳು, ಬಟ್ಟೆ ಅಂಗಡಿಗಳ ಸಂಘ, ಎಪಿಎಂಸಿ ವರ್ತಕರ ಸಂಘದ, ಲಿಕ್ಕರ್ ಮತ್ತು ವೈನ್ ಸಂಘದ, ಬೀದಿ ಬದಿ ವ್ಯಾಪಾರಿಗಳ ಸಂಘ ಸೇರಿದಂತೆ ವಿವಿಧ ರೀತಿಯ ಆರ್ಥಿಕ ಚಟುವಟಿಕೆ ಮಾಡುವಂತಹ ಸಂಸ್ಥೆಗಳ ಸಂಘಗಳ ಪದಾಧಿಕಾರಿಗಳು ಹಾಜರಿದ್ದರು.

## ಗ್ರಾಮಾಂತರದಲ್ಲಿ ಇಂದು - ನಾಳೆ ವಿದ್ಯುತ್ ವ್ಯತ್ಯಯ

ಎಫ್-9 ಶಾಮನೂರು, 11 ಕೆ.ವಿ. ಜೆ.ಹೆಚ್. ಪಟೇಲ್ ನಗರ, ಸಂಭ್ರಮ ಹೋಟೆಲ್ ಸುತ್ತಮುತ್ತ, ಹೊಸ, ಹಳೇ ಕುಂದುವಾಡ, ಕೆ.ಹೆಚ್.ಬಿ. ಕಾಲೋನಿಗಳಿಗೆ ಇಂದು ಮಧ್ಯಾಹ್ನ 2 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

220/66 ಕೆ.ವಿ. ಎಸ್‌ಆರ್ ಎಸ್ ವಿದ್ಯುತ್ ವಿತರಣಾ ಕೇಂದ್ರ ದಿಂದ ಹೊರಡುವ ಎಫ್-21 ತರಳಬಾಳು 11 ಕೆ.ವಿ. ವಿದ್ಯುತ್ ಮಾರ್ಗ ದಿಂದ ವಿದ್ಯುತ್ ಸರಬರಾಜಾಗುವ ಶಿರಮಗೊಂಡನಹಳ್ಳಿ, ನಾಗನೂರು, ನಾಗಮ್ಮ ಕೇಶವಮೂರ್ತಿ ನಗರ, ಬಿಸಲೇರಿ, 6ನೇ ಮತ್ತು 7ನೇ ಮೈಲಿ ಕಲ್ಲು, ಜವಳಗಟ್ಟ ಗ್ರಾಮಗಳಲ್ಲಿ ನಾಳೆ ದಿನಾಂಕ 3 ರಂದು ಸಂಜೆ 6 ರ ವರೆಗೆ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ರಾಜನಹಳ್ಳಿ: ನಾಳೆ ಲಿಂ.ಶ್ರೀಗಳ ಪುಣ್ಯಾರಾಧನೆ



ಮಲೇಬೆನ್ನೂರು, ಏ.1- ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ನಾಳೆ ಏಪ್ರಿಲ್ 3 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದ ಪುರಿ ಸ್ವಾಮಿಗಳ ಪುಣ್ಯಾರಾಧನೆ ಮತ್ತು ಗುರುಪೀಠದ ಟ್ರಸ್ಟಿನ ಸಭೆಯನ್ನು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮಿಗಳ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ ತಿಳಿಸಿದ್ದಾರೆ.

### ಕ್ರಯ ಪತ್ರದ ಫೈಲ್ ಕಳೆದಿದೆ

ಗೀತಾ ಮೋಹನ್ ಕೋಂ ಕೆ.ಬಿ. ಮೋಹನ ರಾವ್, ಮೋಹನ್ ರಿಯಲ್ ಎಸ್ಟೇಟ್ ಏಜನ್ಸೀಸ್, ಕಠಾರೆ ನಿವಾಸ ಡೋ. ನಂ. 2742, 2ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿ ವಾಸವಾಗಿರುವ ನಾನು ತಿಳಿಯ ಪಡಿಸುವುದೇನೆಂದರೆ, ಈಗ ಸುಮಾರು ದಿನಗಳ ಹಿಂದೆ ನಮ್ಮ ಆಫೀಸ್‌ನಲ್ಲಿಟ್ಟಿದ್ದ ಕೆ.ಹೆಚ್.ಬಿ. ಕಾಲೋನಿಯ ಸೈಟ್ ನಂ.1862 'ಡಿ' ಬ್ಲಾಕ್‌ನ ಸೈಟ್ ನನ್ನ ಹೆಸರಿಗೆ ತಾ.24.08.2018 ರಂದು ನೋಂದಾಯಿತವಾಗಿರುವ ಸೊತ್ತಿನ ಮೂಲ ದಾಖಲೆಗಳು ಮತ್ತು ಇದಕ್ಕೆ ಸಂಬಂಧಪಟ್ಟ ಇದರ ಹಿಂದಿನ ದಾಖಲೆಗಳ ಫೈಲ್ ಕಾಣೆಯಾಗಿದೆ ಅಥವಾ ಬೇರೆ ಎಲ್ಲೋ ಕಳೆದಿದೆ. ದಯವಿಟ್ಟು ಈ ಸೊತ್ತಿನ ದಾಖಲೆಗಳಿರುವ ಫೈಲ್ ಯಾರಿಗಾದರೂ ಸಿಕ್ಕಿದ್ದರೆ ನಮ್ಮ ವಿಳಾಸಕ್ಕೆ ತಲುಪಿಸಿ ಅಥವಾ ಈ ಕೆಳಗಿನ ನಂಬರ್‌ಗೆ ಫೋನ್ ಮಾಡಿ, ಅವರಿಗೆ ಸೂಕ್ತವಾಗಿ ಗೌರವಿಸಲಾಗುವುದು.

**ಮೊ: 97424 34049**

### LOSS DOCUMENTS

I have the below documents in my name, related to Pathan cheru city corporation, 15th ward, pathan cheru city, Medhak dist. Telangana state.

**Sale deed documents**
**original link documents number**

1) 6582/2009 2839/1981
2) 6583/2009 2999/1981
3) 6584/2009 2888/1981

The above said 04 documents are lost on date 05.03.2021 at 12.00 pm, at my home while cleaning the house, I have searched the original link documents in my home, I have not found the original link documents.

Anybody finds these document requested to bring them to Vidyanagar Police Station, Davangere and they will be suitably rewarded.

**Veeramachineni Venkata Kiran, Davangere.**
**Contact No. : 99005 59102**









## ದಾಖಲೆಯ ಜಿಎಸ್‌ಟಿ ಸಂಗ್ರಹ

ನವದೆಹಲಿ, ಏ. 1 – ದೇಶದಲ್ಲಿ ಜಿ.ಎಸ್.ಟಿ. ಸಂಗ್ರಹ ಮಾರ್ಚ್ ತಿಂಗಳಲ್ಲಿ 1.23 ಲಕ್ಷ ಕೋಟಿ ರೂ. ಗಳಿಗೆ ತಲುಪಿದೆ. ಕಳೆದ ವರ್ಷ ಇದೇ ತಿಂಗಳಿಗೆಹೋಲಿಸಿದರೆಶೇ.27ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಕಳೆದ ಆರು ತಿಂಗಳಿನಿಂದ ಜಿ.ಎಸ್.ಟಿ. ಸಂಗ್ರಹ 1 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚಾಗಿದೆ. ಆರ್ಥಿಕತೆ ವೇಗವಾಗಿ ಚೇತರಿಸಿಕೊಳ್ಳುತ್ತಿರುವುದನ್ನು ಇದು ತೋರಿಸುತ್ತದೆ ಎಂದು ಸಚಿವಾಲಯ ಹೇಳಿದೆ. ನಕಲಿ ಬಿಲ್ಲಿಂಗ್ ತಡೆಯುವುದೂ ಸೇರಿದಂತೆ ಹಲವಾರು ಕ್ರಮಗಳ ಕಾರಣದಿಂದಾಗಿಯೂ ಕಳೆದ ಕೆಲ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ ಹೆಚ್ಚಾಗುತ್ತಿದೆ ಎಂದು ತಿಳಿಸಲಾಗಿದೆ.


## ಜಮ್ಮುವಿನಲ್ಲಿ ತಿಮ್ಮಪ್ಪನ ದೇವಸ್ಥಾನಕ್ಕೆ 25 ಹೆಕ್ಟೇರ್ ಜಮೀನು

ಜಮ್ಮು, ಏ. 1 – ಜಮ್ಮುವಿನಲ್ಲಿ ದೇವಾಲಯ ನಿರ್ಮಿಸಲು ತಿರುಮಲ ತಿರುಪತಿ ದೇವಸ್ಥಾನ (ಟಿ.ಟಿ.ಡಿ.) ಮುಂದಾಗಿದ್ದು, ದೇವಸ್ಥಾನ ಮಂಡಳಿಗೆ 25 ಹೆಕ್ಟೇರ್ ಜಮೀನು ನೀಡುವುದಾಗಿ ಜಮ್ಮು ಮತ್ತು ಕಾಶ್ಮೀರದ ಆಡಳಿತ ತಿಳಿಸಿದೆ. ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹ ಅವರ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ದೇವಸ್ಥಾನದ ಯಾತ್ರಿಗಳ ಸೌಲಭ್ಯಕ್ಕೆ ಸಂಕೀರ್ಣ ನಿರ್ಮಿಸುವುದು, ವೈದ್ಯಕೀಯ ಹಾಗೂ ಶಿಕ್ಷಣ ಸೌಲಭ್ಯ ಕಲ್ಪಿಸುವುದೂ ಸೇರಿದಂತೆ ಹಲವು ಉದ್ದೇಶಗಳಿಗೆ ಈ ಜಾಗ ನೀಡಲಾಗುತ್ತಿದೆ.

## 8ಕ್ಕೆ ಜನಸ್ಪಂದನ ಸಭೆ

ದಾವಣಗೆರೆ, ಏ.1- ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇದೇ ದಿನಾಂಕ 8 ರಂದು ಬೆಳಿಗ್ಗೆ 10 ಗಂಟೆಗೆ ಜನಸ್ಪಂದನ ಸಭೆ ಏರ್ಪಡಿಸಲಾಗಿದ್ದು, ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ, ಸಭೆಯ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

# ರಜನೀಕಾಂತ್‌ಗೆ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ



ನವದೆಹಲಿ, ಏ. 1 – ತಮಿಳು ಚಿತ್ರ ತಾರೆ ರಜನೀಕಾಂತ್ ಅವರನ್ನು ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಪ್ರಕಟಿಸಿದ್ದಾರೆ.

ಭಾರತೀಯ ಚಿತ್ರರಂಗದ ಅತ್ಯುತ್ತಮ ಗೌರವವಾದ ಫಾಲ್ಕೆ ಪ್ರಶಸ್ತಿಯನ್ನು ರಜನೀಕಾಂತ್ ಅವರಿಗೆ ಮೇ 3ರಂದು ಪ್ರದಾನ ಮಾಡಲಾಗುವುದು. ತಮಿಳುನಾಡು ವಿಧಾನಸಭೆಗೆ ಚುನಾವಣೆ ನಡೆಯುತ್ತಿರುವ ವೇಳೆಯೇ ಈ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಆಶಾ ಭೋಸ್ಲೆ, ಮೋಹನ್ ಲಾಲ್, ಬಿಸ್ವಜಿತ್ ಚಟರ್ಜಿ, ಶಂಕರ್ ಮಹಾದೇವನ್ ಹಾಗೂ ಸುಭಾಷ್ ಘಾಯ್ ಅವರನ್ನು ಒಳಗೊಂಡ ಸಮಿತಿಯು ಸರ್ವಸಮ್ಮತಿಯಿಂದ ರಜನೀಕಾಂತ್ ಅವರನ್ನು ಫಾಲ್ಕೆ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಜಾವಡೇಕರ್ ಹೇಳಿದ್ದಾರೆ.

ಬೆಂಗಳೂರು ನಗರ ಸಾರಿಗೆಯಲ್ಲಿ ಬಸ್ ಕಂಡಕ್ಟರ್ ಆಗಿದ್ದ ರಜನೀಕಾಂತ್, ನಂತರ ನಟನಾ ವೃತ್ತಿಗೆ ಧುಮುಕಿದರು. ಕೆ. ಬಾಲಚಂದರ್ ನಿರ್ದೇಶನದಲ್ಲಿ 1975ರಲ್ಲಿ ಬಿಡುಗಡೆಯಾದ ತಮಿಳು ಚಿತ್ರ 'ಅಪೂರ್ವ ರಾಗಂಗಳ್' ಮೂಲಕ ಅವರು ಗಮನ ಸೆಳೆದರು. ನಂತರ ಬಿಲ್ಲ, ಮುತ್ತು, ಶಿವಾಜಿ ಹಾಗೂ ಎಂತಿರಾನ್ ರೀತಿಯ ಚಿತ್ರಗಳ ಮೂಲಕ ಹೆಸರು ಪಡೆದರು.

ಆರಂಭದಲ್ಲಿ ಖಳನಟನ ಪಾತ್ರದಲ್ಲಿ ನಟಿಸಿದ್ದ ಅವರು, ತೆಲುಗಿನ ಚಿಲಕಮ್ಮ ಚೆಪ್ಪಿಂದಿ ಚಿತ್ರದಲ್ಲಿ ನಾಯಕನಾಗಿದ್ದರು. 1980ರ ದಶಕದಲ್ಲಿ ಅವರು ದಕ್ಷಿಣ ಭಾರತದ ಎಲ್ಲ ಭಾಷೆಗಳ ಚಿತ್ರಗಳಲ್ಲಿ ನಟಿಸಿದ್ದರು ಮತ್ತು ತಮಿಳು ಸಿನೆಮಾದಲ್ಲಿ ನೆಲೆ ಕಂಡಿದ್ದರು.

ತಮ್ಮ ವಿಶಿಷ್ಟ ಮ್ಯಾನರಿಸಂಗಳಿಂದ ಅಭಿಮಾನಿಗಳನ್ನು ರಂಜಿಸುತ್ತಾ ಬಂದಿರುವ ರಜನೀಕಾಂತ್ ಡೈಲಾಗ್‌ಗಳು ಜನಪ್ರಿಯವಾಗಿವೆ. ಜನಪ್ರಿಯತೆಯ ಅಲೆ ಏರಿ ರಾಜಕೀಯಕ್ಕೆ ಧುಮುಕಲು ರಜನೀಕಾಂತ್ ನಿರ್ಧರಿಸಿದ್ದರಾದರೂ, ಆರೋಗ್ಯ ಸಮಸ್ಯೆಗಳಿಂದಾಗಿ ತಮ್ಮ ನಿರ್ಧಾರದಿಂದ ಹಿಂದೆ ಸರಿದರು. ಪ್ರಸಕ್ತ ಅವರು 'ಅಣ್ಣಂತೆ' ಚಿತ್ರದಲ್ಲಿ ನಟಿಸುತ್ತಿದ್ದಾರೆ.

# ಮಲೇಬೆನ್ನೂರು : ಐವರಿಗೆ ಕೊರೊನಾ ಸೋಂಕು


ಮಲೇಬೆನ್ನೂರು, ಏ.1 - ಗುರುವಾರ ಮಲೇಬೆನ್ನೂರು ಹೋಬಳಿಯಲ್ಲಿ 5 ಜನರಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು ಜನರಲ್ಲಿ ಮತ್ತೆ ಆತಂಕವನ್ನು ಹೆಚ್ಚಿಸಿದೆ. ಮಲೇಬೆನ್ನೂರಿನಲ್ಲಿ 14 ವರ್ಷದ ವಿದ್ಯಾರ್ಥಿಗೆ, ಭಾನುವಳ್ಳಿಯಲ್ಲಿ 60 ವರ್ಷದ ವ್ಯಕ್ತಿಗೆ, 16 ವರ್ಷದ ಬಾಲಕಿಗೆ ಮತ್ತು ಕೊಕ್ಕನೂರಿನ 14 ವರ್ಷದ ವಿದ್ಯಾರ್ಥಿಗೆ ಕೊರೊನಾ ಸೋಂಕು ತಗುಲಿದೆ ಎಂದು ಗೊತ್ತಾಗಿದೆ.

ಐವರ ಪೈಕಿ ನಾಲ್ವರು ವಿದ್ಯಾರ್ಥಿಗಳಿಗೆ ಸೋಂಕು ಕಾಣಿಸಿಕೊಂಡಿರುವುದರಿಂದ ಜನರು ಜಾಗೃತರಾಗಬೇಕು ಮತ್ತು ವಿದ್ಯಾರ್ಥಿಗಳು ಕೂಡಾ ಕಡ್ಡಾಯವಾಗಿ ಮಾಸ್ಕ್ ಧರಿಸಿ, ಶಾಲೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಉಪ ತಹಶೀಲ್ದಾರ್ ಆರ್.ರವಿ ಮನವಿ ಮಾಡಿಕೊಂಡಿದ್ದಾರೆ.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte